**ಕರ್ನಾಟಕ ವಿಧಾನ ಪರಿಷತ್ತು**
**ನೂರ ಇಪ್ಪತ್ತಾರನೇ ಅಧಿವೇಶನ**
**ಲಘು ಪ್ರಕಟಣೆ ಭಾಗ – 1**
**ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ**
**ಮಂಗಳವಾರ, ದಿನಾಂಕ: 09.12.2014**

( 1 )

ಸದನವು ಬೆಳಗ್ಗೆ:11.20 ಗಂಟೆಗೆ ಮಾನ್ಯ ಸಭಾಪತಿ (**ಶ್ರೀ ಡಿ.ಹೆಚ್.ಶಂಕರಮೂರ್ತಿ**) ಅವರ ಅಧ್ಯಕ್ಷತೆಯಲ್ಲಿ **"ವಂದೇ ಮಾತರಂ"** ಗೀತೆಯನ್ನು ನುಡಿಸುವುದರೊಂದಿಗೆ ಪ್ರಾರಂಭವಾಯಿತು.

**1.ಸಂತಾಪ ಸೂಚನೆಗಳು**

ಈ ಕೆಳಕಂಡ ಗಣ್ಯ ವ್ಯಕ್ತಿಗಳ ನಿಧನಕ್ಕೆ ಸಂತಾಪ ಸೂಚನೆ ನಿರ್ಣಯವನ್ನು ಮಾನ್ಯ ಸಭಾಪತಿಯವರು ಮಂಡಿಸಿದರು.

| | |
|---|---|
| 01. ವೀರಣ್ಣ ಶಿವಲಿಂಗಪ್ಪ ಕೌಜಲಗಿ, | ವಿಧಾನ ಸಭೆಯ ಮಾಜಿ ಸಭಾಧ್ಯಕ್ಷರು ಹಾಗೂ ಮಾಜಿ ಸಚಿವರು, ಮತ್ತು ಮಾಜಿ ವಿಧಾನ ಸಭೆ ಸದಸ್ಯರು, |
| 02.ಜಿ.ಹೆಚ್.ಅಶ್ವಥರೆಡ್ಡಿ | ಮಾಜಿ ಸಚಿವರು ಹಾಗೂ ಮಾಜಿ ವಿಧಾನ ಸಭೆ ಸದಸ್ಯರು |
| 03. ಎಸ್.ಬಿ.ನಾಗರಾಳ್ | ಮಾಜಿ ಸಚಿವರು ಹಾಗೂ ವಿಧಾನ ಸಭೆ ಮಾಜಿ ಸದಸ್ಯರು |
| 04. ಡಾ: ಹೆಚ್.ಆರ್.ರಾಜು | ಮಾಜಿ ಸಚಿವರು ಹಾಗೂ ವಿಧಾನ ಸಭೆ ಮಾಜಿ ಸದಸ್ಯರು, |
| 05. ಡಾ: ಯು.ಆರ್.ಅನಂತ ಮೂರ್ತಿ | ಜ್ಞಾನಪೀಠ ಪ್ರಶಸ್ತಿ ವಿಜೇತ ಹಿರಿಯ ಸಾಹಿತಿ |
| 06. ಬಿ.ಕೆ.ಎಸ್.ಅಯ್ಯಂಗಾರ್ | ವಿಶ್ವವಿಖ್ಯಾತ ಯೋಗಗುರು |

ಮಾನ್ಯ ಸಭಾನಾಯಕರು ಸಂತಾಪ ಸೂಚನಾ ನಿರ್ಣಯವನ್ನು ಅನುಮೋದಿಸಿ ಮಾತನಾಡಿದರು.

ಮಾನ್ಯ ವಿರೋಧ ಪಕ್ಷದ ನಾಯಕರು ಸಂತಾಪ ಸೂಚನಾ ನಿರ್ಣಯವನ್ನು ಅನುಮೋದಿಸಿ ಮಾತನಾಡಿದರು.

ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನು ಆಚರಿಸಿದ ನಂತರ ಬೆಳಗ್ಗೆ:11.50 ಗಂಟೆಯಲ್ಲಿ 15 ನಿಮಿಷಗಳ ಕಾಲ ಸದನವನ್ನು ಮುಂದೂಡಲಾಯಿತು.

ಸದನವು ಪುನಃ ಮಧ್ಯಾಹ್ನ:12.22 ಗಂಟೆಗೆ ಮಾನ್ಯ ಸಭಾಪತಿ ಅವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

## 02. ಪ್ರಶ್ನೋತ್ತರ

ಮಾನ್ಯ ಸಭಾಪತಿಯವರು ಪ್ರಶ್ನೋತ್ತರ ತೆಗೆದುಕೊಳ್ಳಲು ತಿಳಿಸಿದಾಗ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಸದಸ್ಯರುಗಳು ಕಬ್ಬು ಬೆಳೆಗಾರರ ಸಮಸ್ಯೆಗಳ ಕುರಿತು ನಿಲುವಳಿ ಸೂಚನೆ ನೀಡಿದ್ದು ಅದನ್ನು ತೆಗೆದುಕೊಳ್ಳುವಂತೆ ಒತ್ತಾಯಿಸಿದರು.

ಮೊದಲು ಪ್ರಶ್ನೋತ್ತರ ತೆಗೆದುಕೊಳ್ಳುವಂತೆ ಆಡಳಿತ ಪಕ್ಷದ ಸದಸ್ಯರುಗಳು ಒತ್ತಾಯಿಸಿದರು.

ವಿರೋಧ ಪಕ್ಷದ ಸದಸ್ಯರು ಇದನ್ನು ವಿರೋಧಿಸಿದಾಗ ಗದ್ದಲ ಉಂಟಾಯಿತು. ಇದರಿಂದ ಮಾನ್ಯ ಸಭಾಪತಿಯವರು ಮಧ್ಯಾಹ್ನ:12.25 ರಿಂದ 10 ನಿಮಿಷಗಳ ಕಾಲ ಸದನವನ್ನು ಮುಂದೂಡಿದರು.

ಸದನವು ಪುನಃ ಮಧ್ಯಾಹ್ನ:1.15 ಗಂಟೆಗೆ ಮಾನ್ಯ ಸಭಾಪತಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

ಕಬ್ಬು ಬೆಳೆಗಾರರ ಸಮಸ್ಯೆಗಳ ಕುರಿತು ನಿಲುವಳಿ ಸೂಚನೆ ಅಡಿಯಲ್ಲಿ ಪ್ರಸ್ತಾಪಿಸಲು ಅವಕಾಶ ನೀಡಬೇಕೆಂದು ವಿರೋಧ ಪಕ್ಷದ ನಾಯಕರು ಒತ್ತಾಯಿಸಿದರು.

ಆಡಳಿತ ಪಕ್ಷದ ಸದಸ್ಯರು ಪ್ರಶ್ನೋತ್ತರ ತೆಗೆದುಕೊಳ್ಳುವಂತೆ ಒತ್ತಾಯಿಸಿದಾಗ. ವಿರೋದ ಪಕ್ಷದ ಸದಸ್ಯರು ಗದ್ದಲ ಮುಂದುವರಿಸಿದರು.

ಸದನವನ್ನು ಮಧ್ಯಾಹ್ನ:1.20 ಗಂಟೆಯಿಂದ ಮಧ್ಯಾಹ್ನ:2.30 ಗಂಟೆಯವರೆಗೆ ಮುಂದೂಡಲಾಯಿತು.

ಸದನವು ಪುನಃ ಮಧ್ಯಾಹ್ನ:2.44 ಗಂಟೆಗೆ ಮಾನ್ಯ ಸಭಾಪತಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು

ವಿರೋಧ ಪಕ್ಷದ ನಾಯಕರು ನಿಲುವಳಿ ಸೂಚನೆ ವಿಷಯ ಕುರಿತು ಪ್ರಸ್ತಾಪಿಸಲು ಅವಕಾಶ ಕೋರಿದರು.

ಈ ಸಂದರ್ಭದಲ್ಲಿ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಕ್ರಿಯಾಲೋಪವನ್ನು (point of order) ತಂದರು.

ಮಾನ್ಯ ವಿರೋಧ ಪಕ್ಷದ ನಾಯಕರು ನಿಲುವಳಿ ಸೂಚನೆ ವಿಷಯ ಕುರಿತು ಪ್ರಸ್ತಾಪಿಸಲು ಅವಕಾಶ ಕೋರಿದರು. ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಒಂದು ಕ್ರಿಯಾಲೋಪವನ್ನು (point of order) ತಂದರು, ಇದಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾನ್ಯ ಸಚಿವರು point of order ತರಲು ಸಾಧ್ಯವಿಲ್ಲವೆಂದು ತಿಳಿಸಿದರು ಹಾಗೂ ರೈತರ ಸಮಸ್ಯೆಗಳಿಗೆ ಸ್ಪಂದಿಸದ ಸರ್ಕಾರದ ಧೋರಣೆಯನ್ನು ವಿರೋಧಿಸುವುದಾಗಿ ತಿಳಿಸಿ ವಿರೋಧ ಪಕ್ಷದ ಸದಸ್ಯರುಗಳು ಸದನದ ಬಾವಿಗೆ ಬಂದು ಧರಣಿ ಪ್ರಾರಂಭಿಸಿದರು.

ಇಂದು ಕಾರ್ಯಕಲಾಪಗಳ ಪಟ್ಟಿಯಲ್ಲಿರುವ ಚುಕ್ಕೆ ಗುರ್ತಿನ ಪ್ರಶ್ನೆ ಹಾಗೂ ಪಟ್ಟಿ–I, ಸಮೂಹ–IIರ ಚುಕ್ಕೆ ಗುರುತಿನ ಪ್ರಶ್ನೆಗಳು ಹಾಗೂ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಗಿರುವುದಾಗಿ ತಿಳಿಸಿ ಸದನವನ್ನು ಮಧ್ಯಾಹ್ನ: 3.25 ಗಂಟೆಗೆ ಮುಂದೂಡಿ ದಿನಾಂಕ: 10.12.2014 ರಂದು ಬೆಳಗ್ಗೆ: 11.00 ಗಂಟೆಗೆ ಸಭೆಗೆ ಸೇರುವುದಾಗಿ ಮಾನ್ಯ ಸಭಾಪತಿಯವರು ತಿಳಿಸಿದರು.

**ವಿ.ಶ್ರೀಶ್**
**ಕಾರ್ಯದರ್ಶಿ**

**ಕರ್ನಾಟಕ ವಿಧಾನ ಪರಿಷತ್ತು**
**ನೂರ ಇಪ್ಪತ್ತೈದನೆ ಅಧಿವೇಶನ**

**ಲಘು ಪ್ರಕಟಣೆ ಭಾಗ – 1**
**ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ**
**ಬುಧವಾರ, ದಿನಾಂಕ: 10.12.2014**
(2)

ಸದನವು ಬೆಳಿಗ್ಗೆ:11.12 ಗಂಟೆಗೆ ಮಾನ್ಯ ಸಭಾಪತಿ **(ಶ್ರೀ ಡಿ.ಹೆಚ್.ಶಂಕರಮೂರ್ತಿ)** ಅವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

ಮಾನ್ಯ ವಿರೋಧ ಪಕ್ಷದ ನಾಯಕರು ಕಬ್ಬು ಬೆಳೆಗಾರರ ಸಮಸ್ಯೆಗಳ ಕುರಿತು ನಿಲುವಳಿ ಸೂಚನೆ ಅಡಿಯಲ್ಲಿ ನೀಡಲಾಗಿರುವ ಸೂಚನೆಗೆ ಚರ್ಚೆಗೆ ಅವಕಾಶ ಕಲ್ಪಿಸಿಕೊಡಬೇಕೆಂದು ಕೋರಿದರು.

ಮಾನ್ಯ ಸಭಾನಾಯಕರು ಮಾತನಾಡಿ ಪ್ರಶ್ನೋತ್ತರದ ನಂತರ ನಿಲುವಳಿ ಸೂಚನೆ ವಿಷಯ ಕುರಿತು ಚರ್ಚೆಗೆ ತೆಗೆದುಕೊಳ್ಳಬಹುದೆಂದು ತಿಳಿಸಿದರು.

ನಿಲುವಳಿ ಸೂಚನೆಯ ವಿಷಯವನ್ನು ನಿಯಮ 68ರ ಅಡಿಯಲ್ಲಿ ಚರ್ಚಿಸಲು ಅವಕಾಶ ಕಲ್ಪಿಸುವುದಾಗಿ ಹಾಗೂ ಪ್ರಶ್ನೋತ್ತರದ ನಂತರ ತೆಗೆದುಕೊಳ್ಳುವುದಾಗಿ ಮಾನ್ಯ ಸಭಾಪತಿಯವರು ತಿಳಿಸಿದರು.

ಮಾನ್ಯ ವಿರೋಧ ಪಕ್ಷದ ನಾಯಕರು ಇದನ್ನು ಒಪ್ಪಿರುವುದಾಗಿ ತಿಳಿಸಿದ್ದು ಎಲ್ಲಾ ವಿರೋಧ ಪಕ್ಷದ ಸದಸ್ಯರುಗಳು ತಮ್ಮ ಆಸನಗಳಿಗೆ ತೆರಳಿದರು.

## 01. ಪ್ರಶ್ನೋತ್ತರ

**ಸಮೂಹ–III ಪಟ್ಟಿ– 2 ರ ಈ ಕೆಳಕಂಡ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು;**

| | | |
|---|---|---|
| 01 | 16(372) | ಉತ್ತರಿಸಲಾಯಿತು |
| 02 | 17(368) | ಉತ್ತರಿಸಲಾಯಿತು |
| 03 | 18(355) | ಉತ್ತರಿಸಲಾಯಿತು |
| 04 | 19(436) | ಉತ್ತರಿಸಲಾಯಿತು |
| 05 | 20(353) | ಉತ್ತರಿಸಲಾಯಿತು |
| 06 | 21(259) | ನಿಯಮ 68ರಡಿ ತೆಗೆದುಕೊಳ್ಳುವಂತೆ ತಿಳಿಸಲಾಯಿತು |
| 07 | 22(429) | ಉತ್ತರಿಸಲಾಯಿತು |
| 08 | 23(17) | ಉತ್ತರಿಸಲಾಯತು |
| 09 | 24(11) | ಕಾಲಾವಕಾಶ |
| 10 | 25(421) | ಉತ್ತರಿಸಲಾಯಿತು |
| 11 | 26(406) | ಉತ್ತರಿಸಲಾಯಿತು |
| 12 | 27(403) | ಉತ್ತರಿಸಲಾಯಿತು |
| 13 | 28(326) | ಉತ್ತರಿಸಲಾಯಿತು |
| 14 | 29(366) | ಉತ್ತರಿಸಲಾಯಿತು |
| 15 | 30(437) | ಉತ್ತರಿಸಲಾಯಿತು |

**ಲಿಖಿತ ಮೂಲಕ ಉತ್ತರಿಸುವ ಸಮೂಹ–III ಪಟ್ಟಿ –2ರ ಒಟ್ಟು 137 ಪ್ರಶ್ನೆಗಳ ಪೈಕಿ 104 ಪ್ರಶ್ನೆಗಳಿಗೆ ಉತ್ತರವನ್ನು ಮಾನ್ಯ ಸಭಾನಾಯಕರು ಸದನದಲ್ಲಿ ಮಂಡಿಸಿದರು.**

**02. ಶೂನ್ಯವೇಳೆ**

**01) ಶ್ರೀ ಐವನ್ ಡಿ'ಸೋಜ** ಅವರು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ನಡೆಯುವ ಕಂಬಳ ಜಾನಪದ ಕ್ರೀಡೆಯನ್ನು ನಡೆಸಬಾರದೆಂದು ನಿರ್ಬಂದಿಸಿರುವ ಕುರಿತು ಪ್ರಸ್ತಾಪಿಸಿದರು.

**ಮಾನ್ಯ ಯುವಜನ ಸೇವೆ ಮತ್ತು ಕ್ರೀಡಾ ಸಚಿವರು ಉತ್ತರಿಸಿದರು.**

**02) ಶ್ರೀ ಕೆ.ಎಸ್.ಈಶ್ವರಪ್ಪ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಶ್ರೀ ಮಹಾಂತೇಶ ಶಿವಾನಂದ ಕೌಜಲಗಿ** ಅವರುಗಳು ಕರ್ನಾಟಕ ಆಡಳಿತಾತ್ಮಕ ನ್ಯಾಯಾಧೀಕರಣ ಪೀಠವನ್ನು ಬೆಳಗಾವಿಯಲ್ಲಿ ಸ್ಥಾಪನೆ ಮಾಡುವ ಕುರಿತು ಪ್ರಸ್ತಾಪಿಸಿದರು.

**ಮಾನ್ಯ ಕಾನೂನು ಮತ್ತು ಸಂಸದಿಯ ವ್ಯವಹಾರಗಳ ಸಚಿವರಿಂದ ನಂತರ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.**

**03) ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ** ಅವರು ಪಶ್ಚಿಮಘಟ್ಟ ಕುರಿತು ಡಾ: ಕಸ್ತೂರಿರಂಗನ್ ವರದಿ ಬಗ್ಗೆ ಪ್ರಸ್ತಾಪಿಸಿದರು.

**ಮಾನ್ಯ ಅರಣ್ಯ ಸಚಿವರು ಉತ್ತರಿಸಿದರು.**

**04) ಶ್ರೀ ಎಸ್. ನಾಗರಾಜು (ಸಂದೇಶ್ ನಾಗರಾಜು)** ಅವರು ಹುಣಸೂರು ತಾಲ್ಲೂಕು ಗಾವುಡಗೆರೆ ಹೋಬಳಿಯ ಕೆಲವು ಗ್ರಾಮಗಳಲ್ಲಿ ಕೀಟಬಾದೆ ನಿವಾರಣೆಗೆ ಔಷಧಿ ಸಿಂಪಡಿಸುವಾಗ ಡುಪಾಂಟ್ ಕಂಪನಿಯವರು ತಯಾರಿಸಿದ ಔಷಧಿಯಿಂದ ತಲೆ ಸುತ್ತು ಬಂದು ಚಿಕಿತ್ಸೆ ನೀಡಿದರೂ ಫಲಕಾರಿಯಾಗದೇ ಶ್ರೀ ದಿವಾಕರನಾಯಕ ಎಂಬ ರೈತ ಸಾವನಪ್ಪಿದ್ದು ಅವರಿಗೆ ಪರಿಹಾರ ಧನ ನೀಡುವ ಕುರಿತು ಪ್ರಸ್ತಾಪಿಸಿದರು.

**ಮಾನ್ಯ ಕೃಷಿ ಸಚಿವರು ಉತ್ತರಿಸಿದರು.**

**05) ಶ್ರೀ ಎಸ್.ವಿ. ಸಂಕನೂರ ಹಾಗೂ ಶ್ರೀ ಆಚಾರ್ ಹಾಲಪ್ಪ ಬಸಪ್ಪ** ಅವರುಗಳು ಯಲಬುರ್ಗಾ ತಾಲ್ಲೂಕು ಸರ್ಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕ ಬರೆದ ಪ್ರೇಮ ಪತ್ರ ಪ್ರಕರಣದ ಬಗ್ಗೆ ಪ್ರಸ್ತಾಪಿಸಿದರು.

**ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರಿಂದ ನಂತರ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.**

## 03. ಸಭೆಯ ಮುಂದಿಡಲಾದ ಕಾಗದ ಪತ್ರಗಳು

**ಅ)** ಭಾರತ ಸಂವಿಧಾನದ 368ನೇ ಅನುಚ್ಛೇದದ 2ನೇ ಖಂಡದ ಪರಂತುಕ (ಬಿ) ಖಂಡದ ಮೇರೆಗೆ ಸಂವಿಧಾನಕ್ಕೆ ತಂದಿರುವ 121ನೇ ತಿದ್ದುಪಡಿ ಸ್ಥಿರೀಕರಣ ಸಂದೇಶ ಮತ್ತು ವಿಧೇಯಕದ ಪ್ರತಿಯನ್ನು ಕಾರ್ಯದರ್ಶಿಯವರು ಸಭೆಯ ಮುಂದಿಟ್ಟರು.

ಆ) ಮಾನ್ಯ ಸದಸ್ಯರುಗಳಿಗೆ ಈಗಾಗಲೇ ಒದಗಿಸಲಾಗಿರುವ ಮೊದಲನೇ ಹಾಗೂ ಎರಡನೇ ಪಟ್ಟಿಯ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳನ್ನು ಮಾನ್ಯ ಸಭಾನಾಯಕರು ಸಭೆಯ ಮುಂದಿಟ್ಟರು.

**04. ಕಾರ್ಯದರ್ಶಿಯವರ ವರದಿ**

ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಕಾರ್ಯದರ್ಶಿಯವರು ಸಭೆಯಲ್ಲಿ ಮಂಡಿಸಿದರು.

**05. ವರದಿಯನ್ನೊಪ್ಪಿಸುವುದು**

**ಡಾ: ಜಯಮಾಲ ರಾಮಚಂದ್ರ** (ಸದಸ್ಯರು, ಕರ್ನಾಟಕ ವಿಧಾನ ಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ) ಅವರು ಕರ್ನಾಟಕ ವಿಧಾನ ಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ 29ನೇ ವರದಿಯನ್ನು ಒಪ್ಪಿಸಿದರು.

**06. ಅರ್ಜಿಗಳನ್ನೊಪ್ಪಿಸುವುದು**

**01) ಶ್ರೀ ವಿ.ಎಸ್.ಉಗ್ರಪ್ಪ** ಅವರು ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು, ಕಸಬಾ ಹೋಬಳಿ, ಸಾಗಾನಹಳ್ಳಿ ಗ್ರಾಮದಲ್ಲಿ ದಲಿತರ ಮೇಲೆ ದೌರ್ಜನ್ಯ ಎಸಗಿರುವ ಬಗ್ಗೆ ಹಾಗೂ ಗ್ರಾಮ ಪಂಚಾಯತ್

ಚುನಾಯಿತ ಪ್ರತಿನಿಧಿಗಳನ್ನು ಅಂಗನವಾಡಿ ಕಾರ್ಯಕರ್ತೆ ಹುದ್ದೆಯಿಂದ ವಜಾ ಮಾಡಿರುವ ಬಗ್ಗೆ ಅರ್ಜಿಗಳನ್ನೊಪ್ಪಿಸಿದರು.

**02) ಶ್ರೀ ಕೋಟ ಶ್ರೀನಿವಾಸ ಪೂಜಾರಿ** ಅವರು ಬೆಂಗಳೂರು ಜೀವನ್‌ಭೀಮನಗರದ ಹೆಚ್.ಎ.ಎಲ್ 3ನೇ ಹಂತ, ಐ–25, ಸೆಕ್ಟರ್–13ರ ಬಳಿ ಇರುವ ಬೇಕರಿಯಿಂದ ಜನಸಾಮಾನ್ಯರಿಗೆ ಆಗುತ್ತಿರುವ ತೊಂದರೆ ಬಗ್ಗೆ ಅರ್ಜಿಯನ್ನೊಪ್ಪಿಸಿದರು.

ಸದನವನ್ನು ಮಧ್ಯಾಹ್ನ:1.49 ಗಂಟೆಯಲ್ಲಿ ಮುಂದೂಡಿ ಮಧ್ಯಾಹ್ನ:3.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು ಪ್ರಕಟಿಸಿದರು.

ಸದನವು ಪುನಃ ಮಧ್ಯಾಹ್ನ: 3.23 ಗಂಟೆಗೆ ಮಾನ್ಯ ಸಭಾಪತಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

## 07.ನಿಯಮ 68ರ ಅಡಿಯಲ್ಲಿ ಚರ್ಚೆ

ಕಬ್ಬು ಬೆಳಗಾರರ ಸಮಸ್ಯೆ ಕುರಿತು ಚರ್ಚೆ ಪ್ರಾರಂಭವಾಯಿತು.

ಈ ಕೆಳಕಂಡ ಮಾನ್ಯ ಸದಸ್ಯರುಗಳು ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದರು.

**ಶ್ರೀಯುತರುಗಳಾದ:**

01) ಕೆ.ಎಸ್.ಈಶ್ವರಪ್ಪ **(ಮಾನ್ಯ ವಿರೋಧ ಪಕ್ಷದ ನಾಯಕರು)**

ಮಾನ್ಯ ಉಪ ಸಭಾಪತಿಯವರು ಮಧ್ಯಾಹ್ನ:3.30 ಗಂಟೆಯಲ್ಲಿ ಸಭಾಪತಿಯವರ ಪೀಠದಲ್ಲಿ ಉಪಸ್ಥಿತರಿದ್ದರು.

02) ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ

03) ಬಸವರಾಜ ಹೊರಟ್ಟಿ

04) ಜಿ.ಎಸ್.ನ್ಯಾಮಗೌಡ

05) ಸೋಮಣ್ಣ ಮ.ಬೇವಿನಮರದ

06) ಅಶ್ವಥನಾರಾಯಣ

ಸಂಜೆ:5.20 ಗಂಟೆಯಲ್ಲಿ ಮಾನ್ಯ ಸಭಾಪತಿಯವರು ಪೀಠದಲ್ಲಿ ಉಪಸ್ಥಿತರಿದ್ದರು.

07) ಗೋ.ಮಧುಸೂದನ್

08) ವಿ.ಎಸ್.ಉಗ್ರಪ್ಪ

ಸರ್ಕಾರ ಈ ವಿಷಯದ ಬಗ್ಗೆ ನಾಳೆ ಉತ್ತರ ನೀಡುವುದಾಗಿ ತಿಳಿಸಿ ಸದನವನ್ನು ಸಂಜೆ:6.02 ಗಂಟೆಯಿಂದ ದಿನಾಂಕ:11.12.2014ರಂದು ಬೆಳಗ್ಗೆ:11.00 ಗಂಟೆಯವರೆಗೆ ಮುಂದೂಡಿರುವುದಾಗಿ ಮಾನ್ಯ ಸಭಾಪತಿಯವರು ಪ್ರಕಟಿಸಿದರು.

**ವಿ.ಶ್ರೀಶ್**
**ಕಾರ್ಯದರ್ಶಿ**

**ಕರ್ನಾಟಕ ವಿಧಾನ ಪರಿಷತ್ತು**
**ನೂರ ಇಪ್ಪತ್ತಾರನೇ ಅಧಿವೇಶನ**

**ಲಘು ಪ್ರಕಟಣೆ ಭಾಗ – 1**
**ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ**
**ಗುರುವಾರ, ದಿನಾಂಕ: 11.12.2014**

(3)

ಸದನವು ಬೆಳಿಗ್ಗೆ:11.15 ಗಂಟೆಗೆ ಮಾನ್ಯ ಸಭಾಪತಿ (**ಶ್ರೀ ಡಿ.ಹೆಚ್.ಶಂಕರಮೂರ್ತಿ**) ಅವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

**01. ಅಭಿನಂದನಾ ಪ್ರಸ್ತಾವ**

**ಶ್ರೀ ಕೈಲಾಸ್ ಸತ್ಯಾರ್ಥಿ,** ಮಕ್ಕಳ ಹಕ್ಕುಗಳ ಹೋರಾಟಗಾರ ಹಾಗೂ ಶೈಕ್ಷಣಿಕ ಕಾರ್ಯಕರ್ತರಾದ ಇವರು ಮಕ್ಕಳನ್ನು ಒತ್ತಡದ ದುಡಿಮೆ ಮತ್ತು ಕಳ್ಳ ಸಾಗಾಣಿಕೆಯಿಂದ ರಕ್ಷಿಸಲು ಎಲೆಕ್ಟ್ರಿಕಲ್ ಎಂಜಿನಿಯರ್ ಕೆಲಸ ತ್ಯಜಿಸಿ **"ಬಚಪನ್ ಬಚಾವೋ"** ಆಂದೋಲನದ ಮೂಲಕ ಸುಮಾರು 80 ಸಾವಿರಕ್ಕೂ ಹೆಚ್ಚು ಬಾಲ ಕಾರ್ಮಿಕರ ಮುಕ್ತಿ ಮತ್ತು ಪುನರ್ವಸತಿಗೆ ದುಡಿಯುತ್ತಿರುವ ಶ್ರೀಯುತರ ಮಹತ್ವದ ಗಣನೀಯ ಸಾಧನೆಯನ್ನು ಪರಿಗಣಿಸಿ ವಿಶ್ವದ ಅತ್ಯಂತ ಶ್ರೇಷ್ಠ ಪ್ರಶಸ್ತಿಯಾದ **"ನೋಬಲ್ ಶಾಂತಿ"** ಪ್ರಶಸ್ತಿಯನ್ನು ಪ್ರಧಾನ ಮಾಡಿರುವುದು ಅತ್ಯಂತ ಸಂತೋಷದಾಯಕ ವಿಷಯವಾಗಿರುತ್ತದೆ. ಈ ಸಂದರ್ಭದಲ್ಲಿ **ಶ್ರೀ ಕೈಲಾಸ್ ಸತ್ಯಾರ್ಥಿ** ಅವರಿಗೆ ಈ ಸದನವು ಹೃತ್ಪೂರ್ವಕವಾದ ಅಭಿನಂದನೆಯನ್ನು ಸಲ್ಲಿಸುತ್ತದೆ ಎಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

ಈ ಕುರಿತು ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿದರು.

ಈ ಸಂದರ್ಭದಲ್ಲಿ ಪಾಕಿಸ್ತಾನದ ಮಹಿಳೆ **ಮಲಾಲ** ಅವರಿಗೂ ಸದನವು ಅಭಿನಂದನೆ ಸಲ್ಲಿಸುತ್ತಿರುವುದಾಗಿ ಮಾನ್ಯ ಸಭಾಪತಿಯವರು ತಿಳಿಸಿದರು.

ಮಾನ್ಯ ಸಭಾನಾಯಕರು ವಿಧಾನ ಸಭೆಯಲ್ಲಿ ಸದಸ್ಯರು ಮೊಬೈಲ್‌ನಲ್ಲಿ ಆಟ ಆಡುತ್ತಿದ್ದು ಹೆಣ್ಣುಮಕ್ಕಳ ಚಿತ್ರವನ್ನು ನೋಡುತ್ತಿರುವುದು ಸದನಕ್ಕೆ ಸೂಚಿಸುವ ಅಗೌರವವಾಗಿದೆ ಎಂದು ಪ್ರಸ್ತಾಪಿಸಿದರು. ಇದಕ್ಕೆ ವಿರೋಧ ಪಕ್ಷದ ಸದಸ್ಯರು ತೀವ್ರ ವಿರೋಧ ವ್ಯಕ್ತಪಡಿಸಿದರು. ಇದರಿಂದ ಸದನದಲ್ಲಿ ಗದ್ದಲ ಉಂಟಾಯಿತು. ಇಂತಹ ಶಾಸಕರ ಸದಸ್ಯತ್ವವನ್ನು ಅನರ್ಹಗೊಳಿಸಬೇಕೆಂದು ಹೇಳಿ ಆಡಳಿತ ಪಕ್ಷದ ನಾಯಕರು ಹಾಗೂ ಸದಸ್ಯರುಗಳು ಸದನದ ಬಾವಿಗೆ ಬಂದರು. ಇದನ್ನು ವಿರೋಧಿಸಿ ವಿರೋಧ ಪಕ್ಷದ ನಾಯಕರು ಹಾಗೂ ಸದಸ್ಯರುಗಳು ಸಹ ಸದನದ ಬಾವಿಗೆ ಬಂದರು.

ಇದರಿಂದ ಸದನವನ್ನು ಬೆಳಗ್ಗೆ:11.46 ಗಂಟೆಯಿಂದ 20 ನಿಮಿಷಗಳ ಕಾಲ ಮೂಂದೂಡಿರುವುದಾಗಿ ಮಾನ್ಯ ಸಭಾಪತಿಯವರು ಪ್ರಕಟಿಸಿದರು.

ಸದನವು ಪುನಃ ಮಧ್ಯಾಹ್ನಾ :12.59 ಗಂಟೆಗೆ ಮಾನ್ಯ ಸಭಾಪತಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

ಆಡಳಿತ ಪಕ್ಷದ ಎಲ್ಲಾ ಸದಸ್ಯರುಗಳು ಸದನದ ಬಾವಿಗೆ ಬಂದರು. ಮಾನ್ಯ ಸಭಾಪತಿಯವರು ಆಡಳಿತ ಪಕ್ಷದ ಸದಸ್ಯರುಗಳನ್ನು ತಮ್ಮ ಆಸನಗಳಿಗೆ ತೆರಳುವಂತೆ ಕೋರಿದರು.

ಶ್ರೀ ಬಸವರಾಜ ಹೊರಟ್ಟಿ ಅವರು ಮಾತನಾಡಿ ಸದನದ ಗೌರವದಿಂದಾಗಿ ಎಲ್ಲಾ ಆಡಳಿತ ಪಕ್ಷದ ಸದಸ್ಯರುಗಳನ್ನು ತಮ್ಮ ಆಸನಗಳಿಗೆ ತೆರಳುವಂತೆ ವಿನಂತಿಸಬೇಕಾಗಿ ಮಾನ್ಯ ಸಭಾಪತಿಯವರಲ್ಲಿ ಕೋರಿದರು. ಸದನವನ್ನು ನಡೆಸಲು ಅನುವು ಮಾಡಿಕೊಡಬೇಕೆಂದು ಶ್ರೀ ರಾಮಚಂದ್ರ ಗೌಡ ಮಾತನಾಡಿದರು.

ಈ ಕುರಿತು ಮಾನ್ಯ ಮುಖ್ಯಮಂತ್ರಿಯವರು ಮಾತನಾಡಿ ಎಲ್ಲಾ ಆಡಳಿತ ಪಕ್ಷದ ಸದಸ್ಯರುಗಳನ್ನು ತಮ್ಮ ಆಸನಗಳಿಗೆ ಬರುವಂತೆ ಕೋರಿದರು. ಎಲ್ಲಾ ಆಡಳಿತ ಪಕ್ಷದ ಸದಸ್ಯರು ತಮ್ಮ ಆಸನಗಳಿಗೆ ತೆರಳಿದರು.

ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿ ನಿಯಮ 68ರ ಅಡಿಯಲ್ಲಿನ ವಿಷಯವನ್ನು ಪ್ರಸ್ತಾಪಿಸಿದಾಗ ಹಾಗೂ ಕಬ್ಬು ಬೆಳೆಗಾರರ ಸಮಸ್ಯೆಗಳ ಕುರಿತು ಸರ್ಕಾರದಿಂದ ಉತ್ತರ ಕೊಡಬೇಕಾದ ಸಂದರ್ಭದಲ್ಲಿ ಈ ರೀತಿ ಆಡಳಿತ ಪಕ್ಷದವರು ಧರಣಿ ನಡೆಸಿ ಬಾವಿಗೆ ಬಂದಿರುವುದು ಸರಿಯಲ್ಲವೆಂದು ತಿಳಿಸಿದ್ದರಿಂದ ಗದ್ದಲ ಉಂಟಾಯಿತು ಹಾಗೂ ಮಾನ್ಯ ವಸತಿ ಸಚಿವರು ಮೊಬೈಲ್‌ನಲ್ಲಿ ಅಶ್ಲೀಲ ದೃಶ್ಯಗಳನ್ನು ನೋಡುತ್ತಿರುವುದಾಗಿ ತಿಳಿಸಿ ಅವರು ರಾಜೀನಾಮೆ ನೀಡಬೇಕೆಂದು ಘೋಷಣೆ ಕೂಗಿ ವಿರೋಧ ಪಕ್ಷದ ಸದಸ್ಯರುಗಳು ಸದನದ ಬಾವಿಗೆ ಬಂದರು. ಇದರಿಂದ ಗದ್ದಲ ಉಂಟಾಗಿ ಸದನವನ್ನು ಮಧ್ಯಾಹ್ನ:1.29ರಿಂದ ಮಧ್ಯಾಹ್ನ 3.00 ಗಂಟೆಯವರೆಗೆ ಮುಂದೂಡಿರುವುದಾಗಿ ಮಾನ್ಯ ಸಭಾಪತಿಯವರು ಪ್ರಕಟಿಸಿದರು.

ಸದನವು ಪುನಃ ಮಧ್ಯಾಹ್ನ:3.07 ಗಂಟೆಗೆ ಮಾನ್ಯ ಸಭಾಪತಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

ವಿರೋಧ ಪಕ್ಷದ ಸದಸ್ಯರುಗಳು ಧರಣಿಯನ್ನು ಮುಂದುವರಿಸಿ ಸದನದ ಬಾವಿಗೆ ಬಂದರು.

ಮಾನ್ಯ ಸಭಾಪತಿಯವರು ಸದನದ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಲು ಅನುವಾಗುವಂತೆ ಮಾನ್ಯ ವಿರೋಧ ಪಕ್ಷದ ಸದಸ್ಯರು ತಮ್ಮ ಆಸನಗಳಿಗೆ ತೆರಳುವಂತೆ ಕೋರಿದರು.

ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿ ವಸತಿ ಸಚಿವರು ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದರು.

ಮಾನ್ಯ ಸಭಾಪತಿಯವರು ಮಾತನಾಡಿ ಕೆಳಮನೆಯಲ್ಲಿ ನಡೆದಂತಹ ಘಟನೆಗಳನ್ನು ಈ ಸದನದಲ್ಲಿ ಯಾವುದೇ ರೀತಿಯಲ್ಲಿ ತೆಗೆದುಕೊಳ್ಳಬಾರದೆಂದು ತಿಳಿಸಿ ಎಲ್ಲಾ ವಿರೋಧ ಪಕ್ಷದ ಸದಸ್ಯರನ್ನು ತಮ್ಮ ಆಸನಗಳಿಗೆ ತೆರಳುವಂತೆ ಕೋರಿದರು. ಇದನ್ನು ಒಪ್ಪದ ವಿರೋಧ ಪಕ್ಷದ ಸದಸ್ಯರು ಮಾನ್ಯ ವಸತಿ ಸಚಿವರು ರಾಜೀನಾಮೆ ನೀಡುವಂತೆ ಒತ್ತಾಯಿಸಿದರು. ಇದರಿಂದ ಸದನವನ್ನು ಮಧ್ಯಾಹ್ನ:3.18 ರಿಂದ 20 ನಿಮಿಷಗಳ ಕಾಲ ಮುಂದೂಡಿರುವುದಾಗಿ ಮಾನ್ಯ ಸಭಾಪತಿಯವರು ತಿಳಿಸಿದರು.

ಸದನವು ಪುನಃ ಸಂಜೆ:4.56 ಗಂಟೆಗೆ ಮಾನ್ಯ ಸಭಾಪತಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

ವಿರೋಧ ಪಕ್ಷದ ಸದಸ್ಯರುಗಳು ವಸತಿ ಸಚಿವರು ರಾಜೀನಾಮೆ ನೀಡುವಂತೆ ಘೋಷಣೆ ಕೂಗುತ್ತ ಸದನದ ಬಾವಿಗೆ ಬಂದರು.

**ದಿನಾಂಕ: 11.12.2014ರ ಪಟ್ಟಿ –3, ಸಮೂಹ–IVರ ಚುಕ್ಕೆ ಗುರುತಿನ 15 ಪ್ರಶ್ನೆಗಳ ಪೈಕಿ 11 ಪ್ರಶ್ನೆಗಳಿಗೆ ಹಾಗೂ ಲಿಖಿತ ಮೂಲಕ ಉತ್ತರಿಸುವ ಒಟ್ಟು 158 ಪ್ರಶ್ನೆಗಳ ಪೈಕಿ 108 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸಿರುವುದಾಗಿ ಮಾನ್ಯ ಸಭಾಪತಿಯವರು ಪ್ರಕಟಿಸಿದರು.**

ಸದನವನ್ನು ಸಂಜೆ:4.58 ಗಂಟೆಯಿಂದ ದಿನಾಂಕ: 12.12.2014ರ ಬೆಳಗ್ಗೆ: 11.00 ಗಂಟೆಯವರೆಗೆ ಮುಂದೂಡಿರುವುದಾಗಿ ಮಾನ್ಯ ಸಭಾಪತಿಯವರು ತಿಳಿಸಿದರು.

**ವಿ.ಶ್ರೀಶ್**
**ಕಾರ್ಯದರ್ಶಿ**

**ಕರ್ನಾಟಕ ವಿಧಾನ ಪರಿಷತ್ತು**
**ನೂರ ಇಪ್ಪತ್ತಾರನೇ ಅಧಿವೇಶನ**
**ಲಘು ಪ್ರಕಟಣೆ ಭಾಗ – 1**
**ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ**
**ಶುಕ್ರವಾರ, ದಿನಾಂಕ: 12.12.2014**

(4)

ಸದನವು ಬೆಳಗ್ಗೆ:11.02 ಗಂಟೆಗೆ ಮಾನ್ಯ ಸಭಾಪತಿ **(ಶ್ರೀ ಡಿ.ಹೆಚ್.ಶಂಕರಮೂರ್ತಿ)** ಅವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

ವಿರೋಧ ಪಕ್ಷದ ಸದಸ್ಯರುಗಳು ವಸತಿ ಸಚಿವರು ರಾಜೀನಾಮೆಯನ್ನು ನೀಡುವಂತೆ ಒತ್ತಾಯಿಸಿ ಸದನದ ಭಾವಿಗೆ ಬಂದು ಧರಣಿಯನ್ನು ಮುಂದುವರಿಸಿದರು. ಈ ವಿಷಯ ಕುರಿತು ವಿರೋಧ ಪಕ್ಷದ ನಾಯಕರು ಪ್ರಸ್ತಾಪಿಸಿದರು ಹಾಗೂ ಉತ್ತರ ಕರ್ನಾಟಕದ ಜ್ವಲಂತ ಸಮಸ್ಯೆಗಳನ್ನು ಚರ್ಚಿಸಲು ಅನುವಾಗುವಂತೆ ತಮ್ಮ ಧರಣಿಯನ್ನು ಹಿಂಪಡೆಯುತ್ತಿರುವುದಾಗಿ ತಿಳಿಸಿದ ನಂತರ ವಿರೋಧ ಪಕ್ಷದ ಎಲ್ಲಾ ಸದಸ್ಯರು ತಮ್ಮ ಆಸನಗಳಿಗೆ ಹಿಂತಿರುಗಿದರು.

ಈ ಕುರಿತು ಶ್ರೀ ಬಸವರಾಜ ಹೊರಟ್ಟಿಯವರು ಹಾಗೂ ಮಾನ್ಯ ಉನ್ನತ ಶಿಕ್ಷಣ ಹಾಗೂ ಪ್ರವಾಸೋಧ್ಯಮ ಸಚಿವರು ಮಾತನಾಡಿದರು.

**1.ಪ್ರಶ್ನೋತ್ತರ**

**ಸಮೂಹ-V ಪಟ್ಟಿ– 4 ರ ಈ ಕೆಳಕಂಡ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು;**

| | | |
|---|---|---|
| 01 | 54(582) | ಉತ್ತರಿಸಲಾಯಿತು |
| 02 | 46(637) | ಉತ್ತರಿಸಲಾಯಿತು |
| 03 | 47(160) | ಉತ್ತರಿಸಲಾಯಿತು |
| 04 | 48(688) | ಉತ್ತರಿಸಲಾಯಿತು |
| 05 | 49(720) | ಉತ್ತರಿಸಲಾಯಿತು |
| 06 | 50(601) | ಉತ್ತರಿಸಲಾಯಿತು |
| 07 | 51(709) | ಉತ್ತರಿಸಲಾಯಿತು |
| 08 | 52(589) | ಉತ್ತರಿಸಲಾಯತು |
| 09 | 53(172) | ಉತ್ತರಿಸಲಾಯಿತು |
| 10 | 55(623) | ಉತ್ತರಿಸಲಾಯಿತು |
| 11 | 56(670) | ಉತ್ತರಿಸಲಾಯಿತು |
| 12 | 57(161) | ಉತ್ತರಿಸಲಾಯಿತು |
| 13 | 58(607) | ಉತ್ತರಿಸಲಾಯಿತು |
| 14 | 60(168) | ಉತ್ತರಿಸಲಾಯಿತು |
| 15 | 59(631) | ಕಾಲಾವಕಾಶ |

**ಸಮೂಹ–V ಪಟ್ಟಿ –4ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 166 ಪ್ರಶ್ನೆಗಳ ಪೈಕಿ 106 ಪ್ರಶ್ನೆಗಳಿಗೆ ಉತ್ತರವನ್ನು ಮಾನ್ಯ ಸಭಾನಾಯಕರ ಪರವಾಗಿ ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಸದನದಲ್ಲಿ ಮಂಡಿಸಿದರು.**

**02.ಶೂನ್ಯ ವೇಳೆ**

**01) ಶ್ರೀ ಮರಿತಿಬ್ಬೇಗೌಡ** ಅವರು ಜ್ಞಾನಗಂಗಾ ವಿದ್ಯಾಪೀಠ, ಕುವೆಂಪುನಗರ, ಮೈಸೂರು ಪ್ರೌಢಶಾಲಾ ನಿರ್ದೇಶಕರು ಇದರ ಮಾನ್ಯತೆ ರದ್ದು ಮಾಡಿರುವ ಕುರಿತು ಪ್ರಸ್ತಾಪಿಸಿದರು.

**ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರಿಂದ ಮಂಗಳವಾರ ಉತ್ತರ ಕೊಡಿಸುವುದಾಗಿ ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಸಚಿವರು ತಿಳಿಸಿದರು.**

**02) ಶ್ರೀ ಪಟೇಲ್ ಶಿವರಾಂ** ಅವರು ರೈತರು ಬೆಳೆದ ಬೆಳೆಗೆ ಬೆಲೆ ಕುಸಿದಿರುವ ಬಗ್ಗೆ ಪ್ರಸ್ತಾಪಿಸಿದರು.

**ಮಾನ್ಯ ಕೃಷಿ ರಾಜ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ತಿಳಿಸಿದರು.**

**03) ಶ್ರೀ ಅಲ್ಲಮಪ್ರಭು ಪಾಟೀಲ್ ಹಾಗೂ ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ** ಅವರುಗಳು ಬೆಳಗಾವಿ ತಾಲ್ಲೂಕು ಕೊಂಡಸಕೊಪ್ಪ ಗ್ರಾಮದ ಬಳಿ ರೈತರ ಹೊಲದಲ್ಲಿ ರಾಜಕೀಯ ಪಕ್ಷದ ಪ್ರತಿಭಟನೆ ರ‍್ಯಾಲಿಯಿಂದ ಬೆಳೆ ಹಾನಿಯಾಗಿರುವ ಬಗ್ಗೆ ಪ್ರಸ್ತಾಪಿಸಿದರು.

**ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ತಿಳಿಸಿದರು.**

**04) ಪ್ರೊ: ಪಿ.ವಿ.ಕೃಷ್ಣಭಟ್ ಹಾಗೂ ಕ್ಯಾಪ್ಟನ್ ಗಣೇಶ್ ಕಾರ್ಣಿಕ್** ಅವರುಗಳು ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಸಾವನಪ್ಪಿದ ಬಾಲಕಿ ನಂದಿತಾ ತಂದೆಯವರ ಅಂಗಡಿಗೆ ದುಷ್ಕರ್ಮಿಗಳು ಬೆಂಕಿ ಹಚ್ಚಿರುವ ಕುರಿತು ಪ್ರಸ್ತಾಪಿಸಿದರು.

**ಮಾನ್ಯ ಗೃಹ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ತಿಳಿಸಿದರು.**

**05) ಶ್ರೀ ಅಶ್ವಥನಾರಾಯಣ** ಅವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅವತಿ ಬೆಟ್ಟದ ಬಳಿ 32 ಎಕರೆ ಭೂಮಿಯನ್ನು 99 ವರ್ಷಗಳ ಕಾಲ ಗುತ್ತಿಗೆ ನೀಡುವ ಉದ್ದೇಶದ ಬಗ್ಗೆ ಪ್ರಸ್ತಾಪಿಸಿದರು.

**ಮಾನ್ಯ ಕಂದಾಯ ಸಚಿವರಿಂದ ಮಂಗಳವಾರ ಉತ್ತರ ಕೊಡಿಸುವುದಾಗಿ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪಶುಸಂಗೋಪನೆ ಸಚಿವರು ತಿಳಿಸಿದರು.**

**06) ಶ್ರೀ ಎಸ್.ವ್ಹಿ. ಸಂಕನೂರ** ಇವರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅತಿಥಿ ಉಪನ್ಯಾಸಕರ ಬೇಡಿಕೆ ಕುರಿತು ಪ್ರಸ್ತಾಪಿಸಿದರು.

**ಮಾನ್ಯ ಉನ್ನತ ಶಿಕ್ಷಣ ಸಚಿವರ ಪರವಾಗಿ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪಶು ಸಂಗೋಪನೆ ಸಚಿವರು ಉತ್ತರ ನೀಡಿದರು.**

## 03.ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

**(ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಮೂರನೇ ಪಟ್ಟಿಯನ್ನು ಸಭೆಯ ಮುಂದಿಡಲಾಯಿತು)**

**01) ಶ್ರೀ ಆರ್.ವಿ.ದೇಶಪಾಂಡೆ** (ಮಾನ್ಯ ಉನ್ನತ ಶಿಕ್ಷಣ ಹಾಗೂ ಪ್ರವಾಸೋಧ್ಯಮ ಸಚಿವರು) ಅವರ ಹೆಸರಿನಲ್ಲಿರುವ ಕಾಗದ ಪತ್ರಗಳನ್ನು ಅವರ ಪರವಾಗಿ **ಮಾನ್ಯ ಶ್ರೀ ಟಿ.ಬಿ.ಜಯಚಂದ್ರ** (ಮಾನ್ಯ ಕಾನೂನು ಮತ್ತು

ಸಂಸದೀಯ ವ್ಯವಹಾರಗಳು ಹಾಗೂ ಪಶುಸಂಗೋಪನೆ) ಸಚಿವರು ಸಭೆಯ ಮುಂದೆ ಮಂಡಿಸಿದರು.

**02) ಶ್ರೀ ಕೃಷ್ಣಭೈರೇಗೌಡ (ಮಾನ್ಯ ಕೃಷಿ ರಾಜ್ಯ ಸಚಿವರು)** ಅವರ ಹೆಸರಿನಲ್ಲಿರುವ ಕಾಗದ ಪತ್ರಗಳನ್ನು **ಶ್ರೀ ಟಿ.ಬಿ.ಜಯಚಂದ್ರ** (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪಶುಸಂಗೋಪನೆ) ಸಚಿವರು ಸಭೆಯ ಮುಂದೆ ಮಂಡಿಸಿದರು.

**04. ವರದಿಗಳನ್ನೊಪ್ಪಿಸುವುದು**

**01) ಶ್ರೀ ಪುಟ್ಟಣ್ಣ (ಅಧ್ಯಕ್ಷರು, ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿ)** ಅವರು ವಿಧಾನ ಪರಿಷತ್ತಿನ ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಮೊದಲನೆಯ ವರದಿಯನ್ನು ಒಪ್ಪಿಸಿದರು.

**02) ಶ್ರೀ ಪುಟ್ಟಣ್ಣ (ಅಧ್ಯಕ್ಷರು, ಅರ್ಜಿಗಳ ಸಮಿತಿ)** ಅವರು ವಿಧಾನ ಪರಿಷತ್ತಿನ ಅರ್ಜಿಗಳ ಸಮಿತಿಯ 23ನೇ ವರದಿಯನ್ನು ಒಪ್ಪಿಸಿದರು.

**03) ಶ್ರೀ ಸಿ.ಹೆಚ್. ವಿಜಯಶಂಕರ್ (ಸದಸ್ಯರು, ಹಕ್ಕುಬಾಧ್ಯತಾ ಸಮತಿ)** ಅವರು ವಿಧಾನ ಪರಿಷತ್ತಿನ ಹಕ್ಕುಬಾಧ್ಯತಾ ಸಮಿತಿಯ 76ನೇ ವರದಿಯನ್ನು ಒಪ್ಪಿಸಿದರು.

**04) ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸದಸ್ಯರು, ಕರ್ನಾಟಕ ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಮಿತಿ)** ಅವರು ಕರ್ನಾಟಕ ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್

ರಾಜ್ ಸಮಿತಿಯ 2014–15ನೇ ಸಾಲಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಶಿಕ್ಷಣ ಇಲಾಖೆಗೆ ಸಂಬಂಧಿಸಿದ 7ನೇ ವರದಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿಯಲ್ಲಿಯ ಪ್ರಮುಖ ಯೋಜನೆಗಳಡಿಯಲ್ಲಿ ಚರ್ಚಿಸಿದ ವಿಷಯಗಳ ಮೇಲಿನ ವಿಶೇಷ ವರದಿಗೆ ಸಂಬಂಧಿಸಿದ 8ನೇ ವರದಿ ಹಾಗೂ ನಗರಾಭಿವೃದ್ಧಿ ಇಲಾಖೆಯಡಿಯಲ್ಲಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿನ ರಸ್ತೆ ಮತ್ತು ಚರಂಡಿ ಕಾಮಗಾರಿಗಳಿಗೆ ಸಂಬಂಧಿಸಿದ 9ನೇ ವರದಿಗಳನ್ನು ಒಪ್ಪಿಸಿದರು.

**05.ಪ್ರಕಟಣೆ**

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ **ಶ್ರೀ ಜಗ್ಗೇಶ್** ಅವರು ದಿನಾಂಕ: 02.12.2014ರ ಪತ್ರದಲ್ಲಿ ಅವರ ಅನಾರೋಗ್ಯದ ಕಾರಣ ಪ್ರಸ್ತುತ ಅಧಿವೇಶನದ ಉಪವೇಶನಗಳಿಗೆ ಹಾಜರಾಗಲು ಸಾಧ್ಯವಾಗದಿರುವುದರಿಂದ ಪ್ರಸ್ತುತ ಅಧಿವೇಶನಕ್ಕೆ ಗೈರು ಹಾಜರಾಗಲು ಅನುಮತಿಯನ್ನು ಕೋರಿದ್ದು ಸದರಿಯವರ ಗೈರು ಹಾಜರಿಗೆ ಸದನದ ಸಹಮತಿ ಇದೆಯೆಂದು ಭಾವಿಸುವುದಾಗಿ ಮಾನ್ಯ ಸಭಾಪತಿಯವರು ಪ್ರಕಟಿಸಿದರು.

**06. ಕಾರ್ಯಕಲಾಪಗಳ ಸಲಹಾ ಸಮಿತಿಯ ವರದಿ**

ದಿನಾಂಕ:10.12.2014ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ದಿನಾಂಕ:12.12.2014 ರಿಂದ 20.12.2014ರವರೆಗೆ ಕಾರ್ಯಕಲಾಪಗಳನ್ನು ಈ ಕೆಳಕಂಡಂತೆ ನಡೆಸಲು ತೀರ್ಮಾನಿಸಲಾಯಿತೆಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

01) ಪ್ರಶ್ನೋತ್ತರ, ಗಮನ ಸೆಳೆಯುವ ಸೂಚನೆ, ನಿಯಮ 330ರ ಮೇರೆಗೆ ಚರ್ಚೆ, ನಿಲುವಳಿ ಸೂಚನೆಗಳು, ನಿಯಮ 330ಎ ಸೂಚನೆಗಳು, ಶೂನ್ಯ ವೇಳೆ, ನಿಯಮ 68ರ ಮೇಲಿನ ಪ್ರಸ್ತಾವನಗಳು.

02) ವಿಧೇಯಕಗಳ ಮಂಡನೆ, ಪರ್ಯಾಲೋಚನೆ ಮತ್ತು ಅಂಗೀಕಾರ. ಪೂರಕ ಅಂದಾಜುಗಳ ಮಂಡನೆ, ಪರ್ಯಾಲೋಚನೆ ಮತ್ತು ಅಂಗೀಕಾರ ಹಾಗೂ ಭಾರತ ಸಂವಿಧಾನದ 368ನೇ ಅನುಚ್ಛೇದದ 2ನೇ ಖಂಡದ ಪರಂತುಕದ(ಬಿ) ಖಂಡದ ಮೇರೆಗೆ ಸಂವಿಧಾನಕ್ಕೆ ತಂದಿರುವ 121ನೇ ತಿದ್ದುಪಡಿ ಸ್ಥಿರಿಕರಣ ನಿರ್ಣಯ.

03) ಉತ್ತರ ಕರ್ನಾಟಕ ಭಾಗದ ಅಭಿವೃದ್ಧಿ ವಿಷಯಗಳ ಕುರಿತು ಚರ್ಚೆ.

## 07. ಹಕ್ಕುಚ್ಯುತಿ ಮಂಡನೆ

**01) ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ ಹಾಗೂ ಶ್ರೀ ಕೋಟ ಶ್ರೀನಿವಾಸ ಪೂಜಾರಿ** ಅವರುಗಳು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ (ಕಾಯಿದೆ) 1993ರ ಪ್ರಕರಣ 143ರಂತೆ ಕಾರ್ಯ ನಿರ್ವಹಿಸಲು ಉಡುಪಿ ಜಿಲ್ಲಾಧಿಕಾರಿಗಳು ಅಧಿಕಾರ ವ್ಯಾಪ್ತಿ ಮೀರಿ ವರ್ತಿಸುತ್ತಿರುವುದರಿಂದ ಪಂಚಾಯತ್ ರಾಜ್ ಅಧಿನಿಯಮದಡಿಯಲ್ಲಿ ಆಯ್ಕೆಯಾಗಿರುವ ಸ್ಥಳೀಯ ಸಂಸ್ಥೆಗಳ ಜನ ಪ್ರತಿನಿಧಿಗಳ ಹಕ್ಕುಚ್ಯುತಿ ಕುರಿತು ನೀಡಿರುವ ಹಕ್ಕುಚ್ಯುತಿ ಸೂಚನೆಯನ್ನು ಸದನದಲ್ಲಿ ಮಂಡಿಸಲಾಯಿತು.

ಸದರಿ ಸೂಚನೆಯನ್ನು ಪರಿಶೀಲನೆಗಾಗಿ ಹಕ್ಕು ಬಾಧ್ಯತಾ ಸಮಿತಿಗೆ ವಹಿಸುತ್ತಿರುವುದಾಗಿ ಮಾನ್ಯ ಸಭಾಪತಿಯವರು ತಿಳಿಸಿದರು.

ದಿನಾಂಕ:10.12.2014ರಂದು ನಿಯಮ 68ರ ಅಡಿಯಲ್ಲಿ ಕಬ್ಬು ಬೆಳೆಗಾರರ ಸಮಸ್ಯೆ ಕುರಿತು ಪ್ರಸ್ತಾಪಿಸಲಾಗಿದ್ದ ವಿಷಯದ ಬಗ್ಗೆ ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರಿಂದ ಸರ್ಕಾರದ ಪರವಾಗಿ ಉತ್ತರ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ** ಅವರು ಮಧ್ಯಾಹ್ನ:1.47 ಗಂಟೆಯಲ್ಲಿ ಸಭಾಪತಿಯವರ ಪೀಠದಲ್ಲಿ ಉಪಸ್ಥಿತರಿದ್ದರು.

**ಶ್ರೀ ಪುಟ್ಟಣ್ಣ** ಉಪ ಸಭಾಪತಿಯವರು ಮಧ್ಯಾಹ್ನ:1.49 ಗಂಟೆಯಲ್ಲಿ ಸಭಾಪತಿಯವರ ಪೀಠದಲ್ಲಿ ಉಪಸ್ಥಿತರಿದ್ದರು.

ಮಾನ್ಯ ವಿರೋಧ ಪಕ್ಷದ ನಾಯಕರು ಸ್ಪಷ್ಟೀಕರಣ ಕೋರಿದರು.

ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಸ್ಪಷ್ಟೀಕರಣ ನೀಡಿದರು. ಈ ಕೆಳಕಂಡ ಮಾನ್ಯ ಸದಸ್ಯರುಗಳು ಕಬ್ಬು ಬೆಳೆಗಾರರು ನಿಗದಿ ಪಡಿಸಿರುವ ಬೆಲೆ ನೀಡುವ ಕುರಿತು ಸ್ಪಷ್ಟೀಕರಣ ಕೋರಿದರು.

**ಶ್ರೀಯುತರುಗಳಾದ:**

01) ಕೆ.ಎಸ್.ಈಶ್ವರಪ್ಪ (ಮಾನ್ಯ ವಿರೋಧ ಪಕ್ಷದ ನಾಯಕರು)

02) ವಿ.ಎಸ್.ಉಗ್ರಪ್ಪ

03) ಮರಿತಿಬ್ಬೇಗೌಡ

04) ಪ್ರೊ: ಪಿ.ವಿ.ಕೃಷ್ಣಭಟ್

05) ಸಿ.ಹೆಚ್.ವಿಜಯಶಂಕರ

ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಕಬ್ಬು ಬೆಳೆಗಾರರಿಗೆ ನಿಗದಿಪಡಿಸಿರುವ ರೂ.2500/–ಗಳ ಬೆಲೆಯನ್ನು ಕೊಡಿಸುವುದಾಗಿ ತಿಳಿಸಿದರು.

ಆದರೆ ಹಣವನ್ನು ರೈತರಿಗೆ ಶೀಘ್ರವಾಗಿ ಕೊಡಬೇಕೆಂದು ತಿಳಿಸಿ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಸದಸ್ಯರುಗಳು ಸಭಾತ್ಯಾಗ ಮಾಡಿದರು.

ಸದನವನ್ನು ಮಧ್ಯಾಹ್ನ:3.14ರಿಂದ ಮುಂದೂಡಿ ದಿನಾಂಕ:15.12.2014ರಂದು ಮಧ್ಯಾಹ್ನ:12.15 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿ (ಶ್ರೀ ಪುಟ್ಟಣ್ಣ) ಅವರು ತಿಳಿಸಿದರು.

**ವಿ.ಶ್ರೀಶ್**
**ಕಾರ್ಯದರ್ಶಿ**

**ಕರ್ನಾಟಕ ವಿಧಾನ ಪರಿಷತ್ತು**
**ನೂರ ಇಪ್ಪತ್ತಾರನೇ ಅಧಿವೇಶನ**

**ಲಘು ಪ್ರಕಟಣೆ ಭಾಗ – 1**
**ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ**
**ಸೋಮವಾರ, ದಿನಾಂಕ: 15.12.2014**

(5)

ಸದನವು ಮಧ್ಯಾಹ್ನ:12.37 ಗಂಟೆಗೆ ಮಾನ್ಯ ಸಭಾಪತಿ (**ಶ್ರೀ ಡಿ.ಹೆಚ್.ಶಂಕರಮೂರ್ತಿ**) ಅವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

**01.ಸಂತಾಪ ಸೂಚನೆ**

**ನ್ಯಾಯಮೂರ್ತಿ ಶ್ರೀ ವಿ.ಆರ್.ಕೃಷ್ಣ ಅಯ್ಯರ್** ಅವರು ಹಾಗೂ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ವಿಶೇಷ ಬಾತ್ಮೀದಾರರಾದ **ಶ್ರೀ ಎನ್.ಡಿ.ಶಿವಕುಮಾರ್** ಅವರುಗಳ ನಿಧನಕ್ಕೆ ಸಂತಾಪ ಸೂಚನಾ ನಿರ್ಣಯವನ್ನು ಮಾನ್ಯ ಸಭಾಪತಿಯವರು ಮಂಡಿಸಿದರು.

ಮಾನ್ಯ ಸಭಾನಾಯಕರು ಸಂತಾಪ ಸೂಚನಾ ನಿರ್ಣಯವನ್ನು ಅನುಮೋದಿಸಿ ಮಾತನಾಡಿದರು.

ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದರು.

ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಿದ ನಂತರ ಸದನವನ್ನು ಮಧ್ಯಾಹ್ನ:12.48 ಗಂಟೆಯಿಂದ 10 ನಿಮಿಷಗಳ ಕಾಲ ಮುಂದೂಡಿರುವುದಾಗಿ ಮಾನ್ಯ ಸಭಾಪತಿಯವರು ತಿಳಿಸಿದರು.

ಸದನವು ಪುನ: ಮಧ್ಯಾಹ್ನ:12.54ರಲ್ಲಿ ಮಾನ್ಯ ಸಭಾಪತಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

**02.ಪ್ರಶ್ನೋತ್ತರ**

**ಸಮೂಹ–I ಪಟ್ಟಿ– 5 ರ ಈ ಕೆಳಕಂಡ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು;**

| | | |
|---|---|---|
| 01 | 61(726) | ಉತ್ತರಿಸಲಾಯಿತು |
| 02 | 62(782) | ಉತ್ತರಿಸಲಾಯಿತು |
| 03 | 63(736) | ಉತ್ತರಿಸಲಾಯಿತು |
| 04 | 64(817) | ಉತ್ತರಿಸಲಾಯಿತು |
| 05 | 65(196) | ಉತ್ತರಿಸಲಾಯಿತು |
| 06 | 66(767) | ಉತ್ತರಿಸಲಾಯಿತು |
| 07 | 67(789) | ಉತ್ತರಿಸಲಾಯಿತು |
| 08 | 68(53) | ಕಾಲಾವಕಾಶ |
| 09 | 69(836) | ಉತ್ತರಿಸಲಾಯಿತು |
| 10 | 70(747) | ಉತ್ತರಿಸಲಾಯಿತು |
| 11 | 71(838) | ಉತ್ತರಿಸಲಾಯಿತು |
| 12 | 72(729) | ಉತ್ತರಿಸಲಾಯಿತು |
| 13 | | ಕಾಲಾವಕಾಶ |
| 14 | 74(848) | ಉತ್ತರಿಸಲಾಯಿತು |
| 15 | 75(765) | ಉತ್ತರಿಸಲಾಯಿತು |

**ಸಮೂಹ–I ಪಟ್ಟಿ –5ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 147 ಪ್ರಶ್ನೆಗಳ ಪೈಕಿ 118 ಪ್ರಶ್ನೆಗಳಿಗೆ ಉತ್ತರವನ್ನು ಮಾನ್ಯ ಸಭಾನಾಯಕರು ಸದನದಲ್ಲಿ ಮಂಡಿಸಿದರು.**

**03. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

ವಿಧಾನ ಸಭೆಯಿಂದ ತಿದ್ದುಪಡಿಗಳಿಲ್ಲದೆ ಅಂಗೀಕೃತವಾದ ರೂಪದಲ್ಲಿರುವ 2013ನೇ ಸಾಲಿನ ಅತ್ಯಾವಶ್ಯಕ ಸೇವೆಗಳ ನಿರ್ವಹಣ ವಿಧೇಯಕವನ್ನು ಕಾರ್ಯದರ್ಶಿಯವರು ಸಭೆಯ ಮುಂದೆ ಮಂಡಿಸಿದರು.

**04.ಶೂನ್ಯವೇಳೆ**

**01) ಶ್ರೀ ಬಸವರಾಜ ಹೊರಟ್ಟಿ** ಅವರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಒಂದರಲ್ಲಿ ಅತಿಥಿ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸುತ್ತಿರುವ ಉಪನ್ಯಾಸಕರೊಬ್ಬರು ತಮ್ಮ ಜೀವನೋಪಯಕ್ಕೆ ಬಾರ್‌ನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಪ್ರಸ್ತಾಪಿಸಿದರು.

**ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.**

**02) ಶ್ರೀ ಕೆ.ಎಸ್.ಈಶ್ವರಪ್ಪ** (ಮಾನ್ಯ ವಿರೋಧ ಪಕ್ಷದ ನಾಯಕರು) ಅವರು ಟಿ.ವಿ.–9 ಸುದ್ದಿ ಮಾಧ್ಯಮದ ಮೇಲೆ ಮೋಸ್ಕೊ ಕಾಯ್ದೆ ಅಡಿ ಕ್ರಮ ಕೈಗೊಳ್ಳಲು ಉದ್ದೇಶಿಸಿರುವ ಕುರಿತು ಪ್ರಸ್ತಾಪಿಸಿದರು.

**ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ ಮತ್ತು ವಾರ್ತಾ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.**

**03) ಶ್ರೀ ಎಸ್.ನಾಗರಾಜು (ಸಂದೇಶ ನಾಗರಾಜು)** ಅವರು ಚಾಮರಾಜನಗರ ಜಿಲ್ಲೆ ಸುವರ್ಣಪುರ, ಕೂತನೂರು ರಾಮಾಪುರ ಗ್ರಾಮದ ಬಳಿ ವಿದ್ಯುತ್ ತಂತಿ ಜೋತುಬಿದ್ದು ಹಾನಿಯಾಗಿರುವ ಕುರಿತು ಪ್ರಸ್ತಾಪಿಸಿದರು.

**ಮಾನ್ಯ ಇಂಧನ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.**

**04) ಶ್ರೀ ಆರ್.ಕೆ.ಸಿದ್ದರಾಮಣ್ಣ** ಅವರು ಮೈಸೂರು ಪೇಪರ್ ಮಿಲ್ಸ್ ಕಾರ್ಖಾನೆ ಸ್ಥಗಿತಗೊಳ್ಳುತ್ತಿರುವ ಬಗ್ಗೆ ಪ್ರಸ್ತಾಪಿಸಿದರು.

**ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರುತು ತಿಳಿಸಿದರು.**

**05) ಶ್ರೀ ಪಟೇಲ್ ಶಿವರಾಂ** ಅವರು ಚನ್ನಗಿರಿ ತಾಲ್ಲೂಕು ಸೂಳೆಕೆರೆ ಖಾಸಗಿ ಬಸ್ ಉರುಳಿ ಪ್ರಯಾಣಿಕರು ಜಲ ಸಮಾಧಿಯಾಗಿರುವ ಕುರಿತು ಪ್ರಸ್ತಾಪಿಸಿದರು.

**ಮಾನ್ಯ ಸಭಾನಾಯಕರು ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು.**

**06) ಶ್ರೀ ಜಿ.ಎಸ್.ನ್ಯಾಮಗೌಡ** ಅವರು ಐಹೊಳೆ ಸ್ಥಳಾಂತರ ಕುರಿತು ಪ್ರಸ್ತಾಪಿಸಿದರು.

**ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.**

ಸದನವನ್ನು ಮಧ್ಯಾಹ್ನ 3.00 ಗಂಟೆಯಲ್ಲಿ ಮುಂದೂಡಿ ಸಂಜೆ 4:00 ಗಂಟೆಗೆ ಸೇರುವುದಾಗಿ ಮಾನ್ಯ ಸಭಾಪತಿಯವರು ತಿಳಿಸಿದರು.

ಸದನವು ಪುನ: ಮಧ್ಯಾಹ್ನ:4.17 ಗಂಟೆಗೆ ಮಾನ್ಯ ಸಭಾಪತಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

**ಶ್ರೀ ಗೋ.ಮಧುಸೂದನ್** ಅವರು ಮಾನ್ಯ **ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಮತ್ತು ವಕ್ಫ್** ಸಚಿವರಿಂದ ಹಕ್ಕುಚ್ಯುತಿ ಮಂಡನೆಯಾಗಿದ್ದು, ಹಕ್ಕುಬಾಧ್ಯತಾ ಸಮಿತಿಯ 75ನೇ ವರದಿಯ ಮೇಲೆ ದಿನಾಂಕ:30.07.2014ರಂದು ತೆಗೆದುಕೊಂಡ ನಿರ್ಣಯದಂತೆ ಸರ್ಕಾರವು ಕ್ರಮ ಕೈಗೊಂಡಿರುವುದಿಲ್ಲವೆಂದು ಹಾಗೂ ಕೂಡಲೇ ಕ್ರಮ ಕೈಗೊಂಡು ವರದಿಯನ್ನು ಸದನದಲ್ಲಿ ಮಂಡಿಸಬೇಕೆಂದು ಕೋರಿದರು.

ಈ ಕುರಿತು ಸಭಾನಾಯಕರು ಮಾತನಾಡಿ ಮಾನ್ಯ **ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಮತ್ತು ವಕ್ಫ್** ಸಚಿವರೊಂದಿಗೆ ಚರ್ಚಿಸಿ ನಂತರ ವರದಿಯನ್ನು ಮಂಡಿಸಲಾಗುವುದೆಂದು ತಿಳಿಸಿದರು.

ಈ ಕೆಳಕಂಡ ಸದಸ್ಯರುಗಳು ಮಾತನಾಡಿದರು.

**ಶ್ರೀಯುತರುಗಳಾದ:**

**01) ಬಸವರಾಜ ಹೊರಟ್ಟಿ**

**02) ಕೆ.ಎಸ್.ಈಶ್ವರಪ್ಪ** (ಮಾನ್ಯ ವಿರೋಧ ಪಕ್ಷದ ನಾಯಕರು)

## 05.ಪ್ರಕಟಣೆ

ಕರ್ನಾಟಕ ವಿಧಾನ ಸಭೆ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು

ದಿನಾಂಕ:15.12.2014ರಂದು 2014ನೇ ಸಾಲಿನ ಕರ್ನಾಟಕ ಮೌಲ್ಯವರ್ಧಿತ ತೆರಿಗೆ (2ನೇ ತಿದ್ದುಪಡಿ) ವಿಧೇಯಕವನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅಗೀಕರಿಸಿತೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುವುದಾಗಿ ಮಾನ್ಯ ಸಭಾಪತಿಯವರು ಪ್ರಕಟಿಸಿದರು.

**ನಿಯಮ 68ರ ಅಡಿಯಲ್ಲಿ ಸಾರ್ವಜನಿಕ ಮಹತ್ವದ**

**ಜರೂರು ವಿಷಯದ ಮೇಲೆ ಚರ್ಚೆ**

ಉತ್ತರ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿ ಹಾಗೂ ಆರ್ಥಿಕ ಪನ:ಶ್ಚೇತನಕ್ಕೆ ಅತ್ಯಂತ ಅಗತ್ಯವಿರುವ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಕುರಿತು ಈ ಕೆಳಕಂಡ ಸದಸ್ಯರುಗಳು ಮಾತನಾಡಿದರು.

**ಶ್ರೀಮತಿ/ಶ್ರೀಯುತರುಗಳಾದ**

**01) ಅರುಣ ಶಹಾಪುರ**

**02) ತಾರಾಅನೂರಾಧ**

**03) ಅಮರನಾಥ ಪಾಟೀಲ್**

**04) ಕವಠಗಿಮಠ ಮಹಾಂತೇಶ ಮಲ್ಲಿಕಾರ್ಜುನ**

**05) ಬಸವರಾಜ ಹೊರಟ್ಟಿ**

**06) ಕೆ.ಎಸ್.ಈಶ್ವರಪ್ಪ (ಮಾನ್ಯ ವಿರೋಧ ಪಕ್ಷದ ನಾಯಕರು)**

ಶ್ರೀ ಬಸವರಾಜ ಹೊರಟ್ಟಿ ಅವರು ಸಂಜೆ:5.55 ಗಂಟೆಗೆ ಮಾನ್ಯ ಸಭಾಪತಿಯವರ ಪೀಠದಲ್ಲಿ ಆಸೀನರಾದರು.

ಮಾನ್ಯ ಭಾರಿ ನೀರಾವರಿ ಸಚಿವರು ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದರು.

ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆಯನ್ನು ಮುಂದುವರಿಸಿದರು.

**07) ಶ್ರೀ ಎನ್.ಎಸ್.ಬೋಸರಾಜು**

ಮಾನ್ಯ ಸಭಾಪತಿಯವರು ಸಂಜೆ:6.30 ಗಂಟೆಗೆ ಪೀಠದಲ್ಲಿ ಉಪಸ್ಥಿತರಿದ್ದರು.

**08) ಕೆ.ಬಿ .ಶಾಣಪ್ಪ**

**09) ಅಲ್ಲಮಪ್ರಭು ಪಾಟೀಲ್**

**10) ಆಚಾರ್ ಹಾಲಪ್ಪ ಬಸಪ್ಪ**

**11) ವಿ.ಎಸ್.ಉಗ್ರಪ್ಪ**

ಮಾನ್ಯ ಸಭಾಪತಿಯವರು ಮಾತನಾಡಿದರು.

ಮಾನ್ಯ ಭಾರಿ ನೀರಾವರಿ ಸಚಿವರು ಸ್ಪಷ್ಟೀಕರಣ ನೀಡಿದರು.

**12) ಎಸ್.ವ್ಹಿ.ಸಂಕನೂರ**

**13) ಡಾ: ಜಯಮಾಲ ರಾಮಚಂದ್ರ**

**14) ಎಂ.ಬಿ.ಭಾನುಪ್ರಕಾಶ್**

**15) ಮೃತ್ಯುಂಜಯ ಜಿನಗಾ**

ರಾತ್ರಿ: 7.55 ಗಂಟೆಯಿಂದ ಸದನವನ್ನು ಮುಂದೂಡಿ ದಿನಾಂಕ:16.12.2014ರಂದು ಬೆಳಗ್ಗೆ 10.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು ಪ್ರಕಟಿಸಿದರು.

**ವಿ.ಶ್ರೀಶ್**
**ಕಾರ್ಯದರ್ಶಿ**

**ಕರ್ನಾಟಕ ವಿಧಾನ ಪರಿಷತ್ತು**
**ನೂರ ಇಪ್ಪತ್ತಾರನೇ ಅಧಿವೇಶನ**
**ಲಘು ಪ್ರಕಟಣೆ ಭಾಗ – 1**
**ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ**
**ಮಂಗಳವಾರ, ದಿನಾಂಕ: 16.12.2014**

(6)

ಸದನವು ಬೆಳಗ್ಗೆ:10.13 ಗಂಟೆಗೆ ಮಾನ್ಯ ಸಭಾಪತಿ (**ಶ್ರೀ ಡಿ.ಹೆಚ್.ಶಂಕರಮೂರ್ತಿ**) ಅವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

**1.ಪ್ರಶ್ನೋತ್ತರ**

**ಸಮೂಹ–II ಪಟ್ಟಿ– 6 ರ ಈ ಕೆಳಕಂಡ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು;**

| | | |
|---|---|---|
| 01 | 76(133) | ಉತ್ತರಿಸಲಾಯಿತು |
| 02 | 77(880) | ಉತ್ತರಿಸಲಾಯಿತು |
| 03 | 78(978) | ಉತ್ತರಿಸಲಾಯಿತು |
| 04 | 79(948) | ಉತ್ತರಿಸಲಾಯಿತು |
| 05 | 80(865) | ಕಾಲಾವಕಾಶ |
| 06 | 81(972) | ಉತ್ತರಿಸಲಾಯಿತು |
| 07 | 82(891) | ಉತ್ತರಿಸಲಾಯಿತು |
| 08 | 83(206) | ಕಾಲಾವಕಾಶ |
| 09 | 84(943) | ಕಾಲಾವಕಾಶ |
| 10 | 85(864) | ಶ್ರೀ ಬಸವರಾಜ ಹೊರಟ್ಟಿ ಅವರ ಪರವಾಗಿ ಶ್ರೀ ಮರಿತಿಬ್ಬೇಗೌಡ ಅವರು ಪ್ರಶ್ನೆ ಕೇಳಿದರು – ಉತ್ತರಿಸಲಾಯಿತು. |
| 11 | 86(903) | ಶ್ರೀ ಅಲ್ಲಮಪ್ರಭು ಪಾಟೀಲ್ ಅವರ ಪರವಾಗಿ ಶ್ರೀ ವಿ.ಎಸ್.ಉಗ್ರಪ್ಪ ಅವರು ಪ್ರಶ್ನೆ ಕೇಳಿದರು – ಉತ್ತರಿಸಲಾಯತು. |

| | | |
|---|---|---|
| 12 | 87(989) | ಉತ್ತರಿಸಲಾಯಿತು |
| 13 | 88(860) | ಮಾನ್ಯ ಲೋಕೋಪಯೋಗಿ ಸಚಿವರ ಪರವಾಗಿ ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಉತ್ತರಿಸಿದರು. |
| 14 | 89(916) | ಮಾನ್ಯ ಲೋಕೋಪಯೋಗಿ ಸಚಿವರ ಪರವಾಗಿ ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಉತ್ತರಿಸಿದರು |
| 15 | 90(894) | ಮಾನ್ಯ ಲೋಕೋಪಯೋಗಿ ಸಚಿವರ ಪರವಾಗಿ ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಉತ್ತರಿಸಿದರು |

**ಸಮೂಹ–II ಪಟ್ಟಿ –6ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 134 ಪ್ರಶ್ನೆಗಳ ಪೈಕಿ 96 ಪ್ರಶ್ನೆಗಳಿಗೆ ಉತ್ತರವನ್ನು ಮಾನ್ಯ ಸಭಾನಾಯಕರು ಸದನದಲ್ಲಿ ಮಂಡಿಸಿದರು.**

**02ಸಭೆಯ ಮುಂದಿಡಲಾದ ಕಾಗದ ಪತ್ರಗಳು**

ಕಾರ್ಯದರ್ಶಿಯವರು ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯಲ್ಲಿ ಮಂಡಿಸಿದರು.

01) ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ, 2014

02) ಕರ್ನಾಟಕ ಶಿಕ್ಷಣ (ತಿದ್ದುಪಡಿ) ವಿಧೇಯಕ, 2014

**03.ವರದಿಯನ್ನೊಪ್ಪಿಸುವುದು**

**ಶ್ರೀಮತಿ ಗಾಯತ್ರಿ ಶಾಂತೇಗೌಡ** (ಸದಸ್ಯರು ಕರ್ನಾಟಕ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ) ಅವರು ಸಮಿತಿಯ ಮೊದಲನೆ ವರದಿಯನ್ನು ಒಪ್ಪಿಸಿದರು.

**04.ಶೂನ್ಯವೇಳೆ**

**01) ಶ್ರೀ ಐವನ್ ಡಿ'ಸೋಜ** ಅವರು ಕೊಂಕಣಿ ಅಧ್ಯಯನ ಪೀಠ ಸ್ಥಾಪನೆ ಕುರಿತು ಪ್ರಸ್ತಾಪಿಸಿದರು.

**ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.**

**02) ಶ್ರೀಮತಿ ತಾರಾಅನೂರಾಧ** ಅವರು ಅಧಿವೇಶನ ಕಾರ್ಯ ನಿಮಿತ್ತ ನಿಯೋಜನೆಗೊಂಡಿರುವ ಗರ್ಭಿಣಿ ಮಹಿಳಾ ಪೊಲೀಸ್ ಸಿಬ್ಬಂದಿಗಳಿಗೆ ಸೂಕ್ತ ವ್ಯವಸ್ಥೆ ಕುರಿತು ಪ್ರಸ್ತಾಪಿಸಿದರು.

**ಮಾನ್ಯ ಗೃಹ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.**

**03) ಶ್ರೀಮತಿ ಮೋಟಮ್ಮ** ಅವರು ಚಿಕ್ಕಮಗಳೂರು ಜಿಲ್ಲೆ, ಮೂಡಿಗೆರೆ ತಾಲ್ಲೂಕಿನಲ್ಲಿ ಅಕ್ರಮ-ಸಕ್ರಮದಲ್ಲಿ ಬಡ ರೈತರಿಗೆ ಅನ್ಯಾಯವಾಗಿರುವ ಬಗ್ಗೆ ಪ್ರಸ್ತಾಪಿಸಿದರು.

**ಮಾನ್ಯ ಕಂದಾಯ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.**

**04)** **ಶ್ರೀ ಅಶ್ವಥನಾರಾಯಣ** ಅವರು ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣದಲ್ಲಿರುವ ಶ್ರೀ ರಂಗನಾಥಸ್ವಾಮಿ ದೇವಸ್ಥಾನದ ರಾಜಗೋಪುರದ ಕಳಸ ಕಳಚಿ ಬಿದ್ದರೂ ಸರ್ಕಾರ ದುರಸ್ಥಿಪಡಿಸದಿರುವ ಬಗ್ಗೆ ಪ್ರಸ್ತಾಪಿಸಿದರು.

**ಮಾನ್ಯ ಸಂಸದೀಯ ವ್ಯವಹಾರಗಳು ಹಾಗೂ ಪಶು ಸಂಗೋಪನೆ ಮತ್ತು ಮುಜರಾಯಿ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.**

**05)** **ಶ್ರೀ ಅಮರನಾಥ ಪಾಟೀಲ್** ಅವರು ರೈಲ್ವೆ ಯೋಜನೆಗಳು ಸ್ಥಗಿತಗೊಂಡಿರುವ ಬಗ್ಗೆ ಪ್ರಸ್ತಾಪಿಸಿದರು.

**ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.**

**06)** ದಿನಾಂಕ:15.12.2014ರಂದು **ಶ್ರೀ ಬಸವರಾಜ ಹೊರಟ್ಟಿ** ಅವರು ಹಾಗೂ ದಿನಾಂಕ:12.12.2014ರಂದು **ಶ್ರೀ ಎಸ್.ವ್ವಿ.ಸಂಕನೂರ** ಅವರುಗಳು ಅತಿಥಿ ಉಪನ್ಯಾಸಕರ ಬೇಡಿಕೆಗಳ ಹಾಗೂ ಅತಿಥಿ ಉಪನ್ಯಾಸಕರು ಬಾರ್‌ನಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿಷಯಕ್ಕೆ ಮಾನ್ಯ ಉನ್ನತ ಶಿಕ್ಷಣ ಸಚಿವರು ಮೌಖಿಕವಾಗಿ ಉತ್ತರಿಸಿದರು.

**07)** ದಿನಾಂಕ:12.12.2014ರಂದು **ಶ್ರೀ ಮರಿತಿಬ್ಬೇಗೌಡ** ಅವರು ಪ್ರಸ್ತಾಪಿಸಲಾಗಿದ್ದ ಜ್ಞಾನಗಂಗಾ ವಿದ್ಯಾಪೀಠ ಕುವೆಂಪುನಗರದ ಮಾನ್ಯತೆಯನ್ನು ಪ್ರೌಢಶಾಲಾ ನಿರ್ದೇಶಕರು ರದ್ದುಪಡಿಸಿರುವ ವಿಷಯಕ್ಕೆ ಉತ್ತರವನ್ನು ಮಾನ್ಯ ಸಭಾನಾಯಕರು ಮಂಡಿಸಿದರು.

**08) ಶ್ರೀ ಪಟೇಲ್ ಶಿವರಾಂ** ಅವರು ದಿನಾಂಕ:12.12.2014ರಂದು ಪ್ರಸ್ತಾಪಿಸಲಾಗಿದ್ದ ರೈತರು ಬೆಳೆದ ಬೆಳೆಗೆ ಬೆಲೆ ಕುಸಿದಿರುವ ವಿಷಯಕ್ಕೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

09) ದಿನಾಂಕ:12.12.2014ರಂದು **ಪ್ರೊ:ಪಿ.ವಿ.ಕೃಷ್ಣಭಟ್ ಹಾಗೂ ಕ್ಯಾಪ್ಟನ್ ಗಣೇಶ್ ಕಾರ್ಣಿಕ್** ಅವರುಗಳು ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಸಾವನಪ್ಪಿದ ನಂದಿತಾಳ ತಂದೆಯವರ ಅಂಗಡಿಗೆ ದುಷ್ಕರ್ಮಿಗಳು ಬೆಂಕಿ ಹಾಕಿರುವ ಕುರಿತು ಪ್ರಸ್ತಾಪಿಸಲಾಗಿದ್ದ ವಿಷಯಕ್ಕೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.

10) ದಿನಾಂಕ:15.12.2014ರಂದು **ಶ್ರೀ ಆರ್.ಕೆ.ಸಿದ್ದರಾಮಣ್ಣ** ಅವರು ಮೈಸೂರು ಪೇಪರ್ ಮಿಲ್ಸ್ ಕಾರ್ಖಾನೆ ಸ್ಥಗಿತಗೊಂಡಿರುವ ವಿಷಯಕ್ಕೆ ಉತ್ತರವನ್ನು ಮಾನ್ಯ ಸಭಾನಾಯಕರು ಮಂಡಿಸಿದರು.

## 05. ನಿಯಮ 68ರ ಅಡಿಯಲ್ಲಿ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಚರ್ಚೆ

**ಶ್ರೀಯುತರುಗಳಾದ: ಕೆ.ಎಸ್.ಈಶ್ವರಪ್ಪ** (ಮಾನ್ಯ ವಿರೋಧ ಪಕ್ಷದ ನಾಯಕರು) **ಅಮರನಾಥ ಪಾಟೀಲ್, ಶ್ರೀಮತಿ ತಾರಾಅನೂರಾಧ, ಕವಟಗಿ ಮಠ ಮಹಾಂತೇಶ ಮಲ್ಲಿಕಾರ್ಜುನ ಹಾಗೂ ಅರುಣ ಶಹಾಪೂರ** ಅವರುಗಳು ಉತ್ತರ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿ ಹಾಗೂ ಆರ್ಥಿಕ ಪನ:ಚ್ಛೇತನಕ್ಕೆ ಅತ್ಯಂತ ಅಗತ್ಯವಿರುವ ನೀರಾವರಿ ಯೋಜನೆಗಳನ್ನು

ಅನುಷ್ಠಾನಗೊಳಿಸುವ ಕುರಿತು ನಡೆದ ಚರ್ಚೆಗೆ ಮಾನ್ಯ ಭಾರಿ ನೀರಾವರಿ ಸಚಿವರು ಉತ್ತರ ನೀಡಿದರು.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ ಮಧ್ಯಾಹ್ನ 12.29 ಗಂಟೆಗೆ ಮಾನ್ಯ ಸಭಾಪತಿಯವರ ಪೀಠದಲ್ಲಿ ಉಪಸ್ಥಿತರಿದ್ದರು.**

ಮಧ್ಯಾಹ್ನ:1.15 ಗಂಟೆಗೆ ಮಾನ್ಯ ಸಭಾಪತಿಯವರು ಪೀಠದಲ್ಲಿ ಉಪಸ್ಥಿತರಿದ್ದರು.

ಮಾನ್ಯ ಸಭಾನಾಯಕರು ಈ ಕುರಿತು ಮಾತನಾಡಿದರು.

ಮಾನ್ಯ ಭಾರಿ ನೀರಾವರಿ ಸಚಿವರು ಉತ್ತರ ಮುಂದುವರಿಸಿದರು.

ಸದನವನ್ನು ಮಧ್ಯಾಹ್ನ:1.53 ಗಂಟೆಯಿಂದ ಮಧ್ಯಾಹ್ನ:3.00 ಗಂಟೆವರೆಗೆ ಮುಂದೂಡಿರುವುದಾಗಿ ಮಾನ್ಯ ಸಭಾಪತಿಯವರು ಪ್ರಕಟಿಸಿದರು.

ಸದನವು ಮಧ್ಯಾಹ್ನ:3.15 ಗಂಟೆಗೆ ಮಾನ್ಯ ಸಭಾಪತಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

### 06.ಸಂವಿಧಾನದ ತಿದ್ದುಪಡಿ ಸ್ಥಿರೀಕರಣ ನಿರ್ಣಯ

**"**ಸಂಸತ್ತಿನ ಉಭಯ ಸದನಗಳು ಅಂಗೀಕರಿಸಿರುವಂತೆ ಸಂವಿಧಾನ (ಒಂದು ನೂರ ಇಪ್ಪತ್ತೊಂದನೆ ತಿದ್ದುಪಡಿ ವಿಧೇಯಕ, 2014)ಕ್ಕೆ ತಿದ್ದುಪಡಿ ಮಾಡಬೇಕೆಂದು ಪ್ರಸ್ತಾಪಿಸಲಾದ ಭಾರತ ಸಂವಿಧಾನದ 368ನೇ ಅನುಚ್ಛೇದ(2)ನೇ ಖಂಡದ ಪರಂತುಕದ(ಬಿ) ಖಂಡದ ವ್ಯಾಪ್ತಿಯೊಳಗೆ ಬರುವ ತಿದ್ದುಪಡಿಗಳನ್ನು ಈ ಸದನವು ಸ್ಥಿರೀಕರಿಸುತ್ತದೆ**"** ಎಂಬ ಕುರಿತಾದ

ನಿರ್ಣಯವನ್ನು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಮಂಡಿಸಿದರು.

ಮಾನ್ಯ ಸದಸ್ಯರಾದ ಶ್ರೀ ರಾಮಚಂದ್ರಗೌಡ ಅವರು ಮಾತನಾಡಿದರು.

ನಿರ್ಣಯವನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

**07.ಶಾಸನ ರಚನೆ**

**ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.**

01) ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ, 2014ನ್ನು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಪರ್ಯಾಲೋಚಿಸಬೇಕೆಂದು ಸೂಚಿಸಿದರು ಹಾಗೂ ಅಂಗೀಕರಿಸಬೇಕೆಂದು ಸೂಚಿಸಿದರು.

**ವಿಧೇಯಕವನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.**

ದಿನಾಂಕ:15.12.2014ರಂದು ಶ್ರೀ **ಗೋ.ಮಧುಸೂದನ್** ಅವರು ಹಕ್ಕು ಬಾಧ್ಯತಾ ಸಮಿತಿ ಸಭೆಯ 75ನೇ ವರದಿಯಲ್ಲಿನ ಶಿಫಾರಸ್ಸುಗಳ ಮೇಲೆ ಸರ್ಕಾರ ಕೈಗೊಂಡ ಕ್ರಮದ ಬಗ್ಗೆ ವರದಿಯನ್ನು ದಿನಾಂಕ:17.12.2014ರಂದು ಸದನದಲ್ಲಿ ಮಂಡಿಸಲಾಗುವುದೆಂದು ಮಾನ್ಯ ಸಭಾನಾಯಕರು ತಿಳಿಸಿದರು.

**ನಿಯಮ 68ರಡಿಯಲ್ಲಿ ಸಾರ್ವಜನಿಕ ಮಹತ್ವದ ವಿಷಯದ ಮೇಲೆ**

**ಮುಂದುವರೆದ ಚರ್ಚೆ**

ನಿಯಮ 68ರಡಿಯಲ್ಲಿ ಉತ್ತರ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿ ಹಾಗೂ ಆರ್ಥಿಕ ಪುನ:ಚ್ಚೇತನಕ್ಕೆ ಅಗತ್ಯವಿರುವ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಕುರಿತು ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರಿಂದ ಮುಂದುವರೆದ ಉತ್ತರ.

ಮಾನ್ಯ ಶ್ರೀ ಡಿ.ಎಸ್.ವೀರಯ್ಯ ಅವರು ಸಂಜೆ:4.43 ಗಂಟೆಗೆ ಸಭಾಪತಿಯವರ ಪೀಠದಲ್ಲಿ ಉಪಸ್ಥಿತರಿದ್ದರು.

ಸಂಜೆ: 5.29 ಗಂಟೆಯಲ್ಲಿ ಮಾನ್ಯ ಸಭಾಪತಿಯವರು ಪೀಠದಲ್ಲಿ ಉಪಸ್ಥಿತರಿದ್ದರು

ಈ ಕೆಳಕಂಡ ಸದಸ್ಯರುಗಳು ಸ್ಪಷ್ಟೀಕರಣ ಕೋರಿದರು.

**ಶ್ರೀಮತಿ/ಶ್ರೀಯುತರುಗಳಾದ:**

01) ತಾರಾಅನೂರಾಧ
02) ವಿ.ರಘುಆಚಾರ್
03) ಕೆ.ಬಿ.ಶಾಣಪ್ಪ

ಸರ್ಕಾರದ ಉತ್ತರದಿಂದ ತೃಪ್ತರಾಗದ ವಿರೋಧ ಪಕ್ಷದ ಸದಸ್ಯರುಗಳು ಇದನ್ನು ವಿರೋಧಿಸಿ ಸಭಾತ್ಯಾಗ ಮಾಡಿದರು.

04) ಬಿ.ರಾಮಕೃಷ್ಣ ಅವರು ಸ್ಪಷ್ಟೀಕರಣ ಕೋರಿದರು.

**ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಉತ್ತರಿಸಿದರು.**

**08.ಗಮನ ಸೆಳೆಯುವ ಸೂಚನೆ**

**01) ಶ್ರೀ ಎಂ.ಡಿ.ಲಕ್ಷ್ಮಿನಾರಾಯಣ** ಅವರು ಬೆಳಗಾವಿ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಚಾಲಿತ ಮಗ್ಗಗಳನ್ನು ಸ್ಥಾಪಿಸಲು ಸರ್ಕಾರವು ಸಬ್ಸಿಡಿ ನೀಡಿ ಯೋಜನೆಯನ್ನು ಅನುಷ್ಠಾನಕ್ಕೆ ತಂದಿದ್ದರೂ ಸಹ ಬೆಳಗಾವಿ ನಗರ ಸಭೆಯ ಅಧಿಕಾರಿಗಳು ಅನುಮತಿ ನೀಡದಿರುವುದರಿಂದ ಬಡ ನೇಕಾರರಿಗೆ ಅನ್ಯಾಯವಾಗುತ್ತಿರುವ ಬಗ್ಗೆ ಪ್ರಸ್ತಾಪಿಸಿದರು.

**ಮಾನ್ಯ ನಗರಾಭಿವೃದ್ಧಿ ಸಚಿವರು ಉತ್ತರಿಸಿದರು.**

**02) ಶ್ರೀ ಸೋಮಣ್ಣ ಮ. ಬೇವಿನ ಮರದ** ಅವರು ರಾಜ್ಯದ್ಯಾಂತ ಹಾಗೂ ಹಾವೇರಿ ಜಿಲ್ಲೆಯಲ್ಲಿ ಈರುಳ್ಳಿ ಬೆಳೆಗಾರರು ನಷ್ಟಕ್ಕೆ ಒಳಗಾಗಿರುವ ಹಿನ್ನಲೆಯಲ್ಲಿ ಈರುಳ್ಳಿ ಬೆಲೆಗೆ ಬೆಂಬಲ ಬೆಲೆಯನ್ನು ನಿಗಧಿಗೊಳಿಸುವ ಬಗ್ಗೆ ಪ್ರಸ್ತಾಪಿಸಿದರು.

**ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಉತ್ತರಿಸಿದರು.**

**03) ಶ್ರೀ ಮಾನೆ ಶ್ರೀನಿವಾಸ** ಅವರು ಸ್ಥಳೀಯ ಸಂಸ್ಥೆಗಳಾದ ಪಟ್ಟಣ ಪಂಚಾಯಿತಿ ಪುರಸಭೆ ಹಾಗೂ ನಗರ ಸಭೆಗಳ ಅಧ್ಯಕ್ಷರಿಗೆ ಅವರ ವ್ಯಾಪ್ತಿಯ ಅಧಿಕಾರಿಗಳ ಗುಪ್ತ ವರದಿಯನ್ನು ಬರೆಯುವ ಅಧಿಕಾರವನ್ನು ನೀಡುವ ಬಗ್ಗೆ ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರ ಗಮನ ಸೆಳದರು.

**ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಉತ್ತರಿಸಿದರು.**

ಈ ಕೆಳಕಂಡ ಸದಸ್ಯರುಗಳು ಸ್ಪಷ್ಟೀಕರಣ ಕೋರಿದರು.

**ಶ್ರೀಯುತರುಗಳಾದ:**

01) ಮಾನೆ ಶ್ರೀನಿವಾಸ

02) ಕೋಟ ಶ್ರೀನಿವಾಸ ಪೂಜಾರಿ

03) ಕೆ.ಪ್ರತಾಪಚಂದ್ರ ಶೆಟ್ಟಿ

**ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಸ್ಪಷ್ಟೀಕರಣ ನೀಡಿದರು.**

ಸದನವನ್ನು ಸಂಜೆ:6.28 ಗಂಟೆಯಲ್ಲಿ ಮುಂದೂಡಿ ದಿನಾಂಕ:17.12.2014ರಂದು ಬೆಳಗ್ಗೆ:11.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು ಪ್ರಕಟಿಸಿದರು.

**ವಿ.ಶ್ರೀಶ್**
**ಕಾರ್ಯದರ್ಶಿ**

**ಕರ್ನಾಟಕ ವಿಧಾನ ಪರಿಷತ್ತು**
**ನೂರ ಇಪ್ಪತ್ತಾರನೇ ಅಧಿವೇಶನ**
**ಲಘು ಪ್ರಕಟಣೆ ಭಾಗ – 1**
**ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ**
**ಬುಧವಾರ, ದಿನಾಂಕ: 17.12.2014**

(7)

ಸದನವು ಬೆಳಗ್ಗೆ:11.19 ಗಂಟೆಗೆ ಮಾನ್ಯ ಸಭಾಪತಿ **(ಶ್ರೀ ಡಿ.ಹೆಚ್.ಶಂಕರಮೂರ್ತಿ)** ಅವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

**1.ಸಂತಾಪ ಸೂಚನೆ**

ನೆರೆಯ ರಾಷ್ಟ್ರ ಪಾಕಿಸ್ತಾನದ ಪೇಶಾವರದಲ್ಲಿರುವ ಆರ್ಮಿ ಪಬ್ಲಿಕ್ ಶಾಲೆಯಲ್ಲಿ ದಿನಾಂಕ:16.12.2014ರಂದು ತೆಹ್ರೆಕ್–ಎ–ತಾಲಿಬಾನ್‌ಗೆ ಸೇರಿದ ಎಂಟು ಮಂದಿ ಉಗ್ರರು ಕಾರುಣ್ಯ ರಹಿತರಾಗಿ ಗುಂಡಿನ ದಾಳಿ ನಡೆಸಿ ಸುಮಾರು 132 ಮಕ್ಕಳು ಸೇರಿದಂತೆ 180 ಮಂದಿಯನ್ನು ಹತ್ಯೆ ಮಾಡಿದ್ದಾರೆ. ಉಗ್ರರು ಸೇನಾ ಉಡುಪಿನಲ್ಲಿ ಶಾಲೆ ಪ್ರವೇಶಿಸಿ ಎಂಟು ಗಂಟೆಗಳ ಕಾಲ ಮಾರಣ ಹೋಮ ನಡೆಸಿ ಘನ ಘೋರ ಕೃತ್ಯವನ್ನು ನಡೆಸಿದ್ದು ಇದು ವಿಶ್ವವನ್ನೇ ಬೆಚ್ಚಿ ಬೀಳಿಸಿದೆ. ಸಾವಿನ ಸಂಖ್ಯೆ ಇನ್ನು ಹೆಚ್ಚಾಗುತ್ತಿದೆ. ಸೈನಿಕರ ಆತ್ಮಸ್ಥೈರ್ಯ ಕುಗ್ಗಿಸಲು ಹಾಗೂ ವಿಶ್ವದಾದ್ಯಂತ ತಲ್ಲಣ ಮೂಡಿಸಲು ಮಾಡಿರುವ ಹೇಯ ಕೃತ್ಯ ಅತ್ಯಂತ ಖಂಡನಾರ್ಹವಾದುದು. ಈ ಭಯೋತ್ಪಾದನಾ ಕೃತ್ಯವನ್ನು ಖಂಡಿಸುತ್ತಾ ಸದನವು ಸಾವಿಗೀಡಾದ ಮಕ್ಕಳ ಹಾಗೂ ನಾಗರೀಕರ ಕುಟುಂಬ ವರ್ಗದವರಿಗೆ ದುಃಖ: ಹಾಗೂ ನೋವನ್ನು

ಭರಿಸುವ ಶಕ್ತಿ ನೀಡಲೆಂದು ಒಂದು ನಿಮಿಷದ ಮೌನವನ್ನು ಆಚರಿಸಲಾಯಿತು.

## 2.ಪ್ರಶ್ನೋತ್ತರ

**ಸಮೂಹ–III ಪಟ್ಟಿ– 7 ರ ಈ ಕೆಳಕಂಡ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು;**

| | | |
|---|---|---|
| 01 | 91(1132) | ಉತ್ತರಿಸಲಾಯಿತು |
| 02 | 92(993) | ಉತ್ತರಿಸಲಾಯಿತು |
| 03 | 93(1005) | ಉತ್ತರಿಸಲಾಯಿತು |
| 04 | 94(1036) | ಉತ್ತರಿಸಲಾಯಿತು |
| 05 | 95(1047) | ಉತ್ತರಿಸಲಾಯಿತು |
| 06 | 96(999) | ಉತ್ತರಿಸಲಾಯಿತು |
| 07 | 97(1086) | ಉತ್ತರಿಸಲಾಯಿತು |
| 08 | 98(137) | ಉತ್ತರಿಸಲಾಯಿತು |
| 09 | 99(1104) | ಉತ್ತರಿಸಲಾಯಿತು |
| 10 | 100(136) | ಉತ್ತರಿಸಲಾಯಿತು |
| 11 | 101(1060) | ಉತ್ತರಿಸಲಾಯಿತು |
| 12 | 102(1085) | ಉತ್ತರಿಸಲಾಯಿತು |
| 13 | 103(1001) | ಉತ್ತರಿಸಲಾಯಿತು |
| 14 | 104(1096) | ಶ್ರೀ ಆಚಾರ್ ಹಾಲಪ್ಪ ಬಸಪ್ಪ ಅವರ ಪರವಾಗಿ ಶ್ರೀ ಅರುಣ ಶಹಾಪುರ ಪ್ರಶ್ನೆ ಕೇಳಿದರು–ಉತ್ತರಿಸಲಾಯಿತು |
| 15 | 105(1041) | ಕಾಲಾವಕಾಶ |

**ಸಮೂಹ–III ಪಟ್ಟಿ –7ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 132 ಪ್ರಶ್ನೆಗಳ ಪೈಕಿ 98 ಪ್ರಶ್ನೆಗಳಿಗೆ ಉತ್ತರವನ್ನು ಮಾನ್ಯ ಸಭಾನಾಯಕರು ಸದನದಲ್ಲಿ ಮಂಡಿಸಿದರು.**

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಹಾಗೂ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಇದುವರೆವಿಗೂ ಉತ್ತರ ನೀಡದಿರುವ ಪ್ರಶ್ನೆಗಳಿಗೆ ಅಧಿವೇಶನದ ಅವಧಿಯೊಳಗೆ ಅಥವಾ ಒಂದು ತಿಂಗಳೊಳಗೆ ಉತ್ತರಗಳನ್ನು ಕೊಡಿಸಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರೆ ಸದಸ್ಯರು ಮಾನ್ಯ ಸಭಾನಾಯಕರನ್ನು ಕೋರಿದರು.

ಮಾನ್ಯ ಸಭಾನಾಯಕರು ಉತ್ತರಗಳನ್ನು ಒದಗಿಸಲಾಗುವುದೆಂದು ತಿಳಿಸಿದರು.

**3.ಶೂನ್ಯವೇಳೆ**

**01) ಶ್ರೀ ಮರಿತಿಬ್ಬೇಗೌಡ** ಅವರು ಮಂಡ್ಯ ತಾಲ್ಲೂಕು ಕಿರುಗಾವಲು ಹೋಬಳಿ ತಳಗವಾದಿ ಗ್ರಾಮದ ಒಂದು ಮನೆಯಲ್ಲಿ ದಿನಾಂಕ:11.11.2014ರಂದು ಅನಿಲ ಸೋರಿಕೆಯಿಂದ ಬೆಂಕಿ ಹೊತ್ತಿಕೊಂಡು ಶ್ರೀ ಬಿ.ವಿ.ರಾಮಲಿಂಗೇಗೌಡ (39 ವರ್ಷ) ಶ್ರೀಮತಿ ನವೀನ (33 ವರ್ಷ) ಇವರು ಮೃತಪಟ್ಟಿದ್ದು, ಬಿ.ಮಹಲಿಂಗೇಶ್ವರ (9 ವರ್ಷದ ಬಾಲಕ) ಇವನು ಜೆ.ಎಸ್.ಎಸ್. ಆಸ್ಪತ್ರೆ ಮೈಸೂರು ಇಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ಮೃತ ಕುಟುಂಬಕ್ಕೆ 10 ಲಕ್ಷ ಪರಿಹಾರ ಧನವನ್ನು ಕೊಡಿಸಬೇಕೆಂದು ಪ್ರಸ್ತಾಪಿಸಿದರು.

ಮಾನ್ಯ ಕಂದಾಯ ಸಚಿವರು ಪ್ರಕರಣವನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

**02)** ಕಲಬುರ್ಗಿ ಜಿಲ್ಲೆ ಜೇವರ್ಗಿ ತಾಲ್ಲೂಕು ಬರಗಾಲ ಪೀಡಿತವಾಗಿದ್ದು ಬೆಳೆ ನಷ್ಟ ಪರಿಹಾರ ನೀಡುವಂತೆ ರೈತರು ಸತ್ಯಾಗ್ರಹ ಮಾಡುತ್ತಿರುವುದರಿಂದ ಪರಿಹಾರ ಘೋಷಿಸಬೇಕೆಂದು **ಶ್ರೀ ಅಲ್ಲಮಪ್ರಭು ಪಾಟೀಲ್** ಅವರು ಪ್ರಸ್ತಾಪಿಸಿದರು.

ಮಾನ್ಯ ಸಭಾನಾಯಕರು ಈ ಕುರಿತು ಪರಿಶೀಲಿಸಿ ಶೀಘ್ರವಾಗಿ ಪರಿಹಾರ ನೀಡಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

**03) ಶ್ರೀ ಸೋಮಣ್ಣ ಮ.ಬೇವಿನ ಮರದ** ಅವರು ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕು ಕಡಕೋಳ ಗ್ರಾಮದವಾಸಿ ನಂದೆಪ್ಪ ಸಂಗಪ್ಪ ದೇಸಾಯಿ ಅವರು ಆತ್ಮಹತ್ಯೆ ಮಾಡಿಕೊಂಡಿರುವುದರಿಂದ ಪರಿಹಾರ ನೀಡಬೇಕೆಂದು ಕೋರಿದರು.

ಮಾನ್ಯ ಸಭಾನಾಯಕರು ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

**04) ಕ್ಯಾಪ್ಟನ್ ಗಣೇಶ್ ಕಾರ್ಣಿಕ್** ಇವರು ಬೆಂಗಳೂರು ಜಿಲ್ಲೆ ಹೊಸಕೋಟೆಯ ಸೂಲಿಬೆಲೆಯ ಚನ್ನಬೈರೇಗೌಡ ನಗರದಲ್ಲಿ ಮೂಕ ಮಹಿಳೆಯ ಮೇಲೆ ಸತತವಾಗಿ ಅತ್ಯಾಚಾರ ಎಸಗಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗೃಹ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

**05) ಶ್ರೀ ಟಿ.ಎ.ಶರವಣ** ಅವರು ವಿದ್ಯುತ್ ಬೆಲೆ ಏರಿಕೆ ಮಾಡುತ್ತಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಸಭಾನಾಯಕರು ಇಂಧನ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು.

**06) ಶ್ರೀ ಕೆ.ಎಸ್.ಈಶ್ವರಪ್ಪ** (ಮಾನ್ಯ ವಿರೋಧ ಪಕ್ಷದ ನಾಯಕರು) ಅವರು ದಿನಾಂಕ:15.12.2014ರಂದು ಪ್ರಸ್ತಾಪಿಸಿರುವ ಟಿ.ವಿ.–9 ಕನ್ನಡ ಸುದ್ದಿ ವಾಹಿನಿಯ ಮೇಲೆ ಪೋಕ್ಸೊ ಕಾಯ್ದೆಯಡಿ ಕ್ರಮ ಕೈಗೊಳ್ಳಲು ಉದ್ದೇಶಿಸಲಾಗಿರುವ ವಿಷಯಕ್ಕೆ ಮಾನ್ಯ ಗೃಹ ಸಚಿವರ ಪರವಾಗಿ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

## 4.ವಿತ್ತೀಯ ಕಾರ್ಯಕಲಾಪ

**01) ಶ್ರೀ ಸಿದ್ದರಾಮಯ್ಯ** (ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು) ಅವರ ಪರವಾಗಿ ಮಾನ್ಯ ಸಭಾನಾಯಕರು "ಭಾರತ ಸಂವಿಧಾನ 205(1)(ಎ)ನೆಯ ಅನುಚ್ಛೇದದ ಮೇರೆಗೆ 2014–15ನೇ ಸಾಲಿನ ಪೂರಕ ಅಂದಾಜುಗಳನ್ನು (ಎರಡನೇ ಕಂತನ್ನು) ಒಪ್ಪಿಸಿದರು.

## 5.ಸಭೆಯ ಮುಂದಿಡಲಾದ ಕಾಗದ ಪತ್ರಗಳು

**01) ಶ್ರೀ ಸಿದ್ದರಾಮಯ್ಯ** (ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು) ಅವರ ಪರವಾಗಿ ಮಾನ್ಯ ಸಭಾನಾಯಕರು "ಭಾರತ ಸಂವಿಧಾನ 151(2)ನೇ ಅನುಚ್ಛೇದದ ಮೇರೆಗೆ 31ನೇ ಮಾರ್ಚ್ 2013ಕ್ಕೆ

ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರ ಕರ್ನಾಟಕ ಗೃಹ ಮಂಡಳಿಯಿಂದ ಭೂ ಸ್ವಾಧೀನ ಮತ್ತು ಅಭಿವೃದ್ಧಿ ಹಾಗೂ ನಿವೇಶನಗಳ / ಮನೆಗಳ / ಪ್ಲಾಟ್‌ಗಳ ಹಂಚಿಕೆಯ ಮೇಲೆ ಕಾರ್ಯ ನಿರ್ವಹಣಾ ಲೆಕ್ಕ ಪರಿಶೋಧನೆ ವರದಿಯನ್ನು ಸಭೆಯ ಮುಂದೆ ಮಂಡಿಸಿದರು.

**02) ಮಾನ್ಯ ಕಾರ್ಯದರ್ಶಿಯವರು** ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗಿಕೃತರೂಪದಲ್ಲಿರುವ 2014ನೇ ಸಾಲಿನ ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ(ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದಿಟ್ಟರು.

ಸದನವನ್ನು ಮಧ್ಯಾಹ್ನ:1.50 ಗಂಟೆಯಿಂದ ಮಧ್ಯಾಹ್ನ:3.00 ಗಂಟೆವರೆಗೆ ಮುಂದೂಡಿರುವುದಾಗಿ ಮಾನ್ಯ ಸಭಾಪತಿಯವರು ಪ್ರಕಟಿಸಿದರು.

ಸದನವು ಮಧ್ಯಾಹ್ನ:3.40 ಗಂಟೆಗೆ ಮಾನ್ಯ ಸಭಾಪತಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

ಭಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ನಾರಾಯಣಪುರ ಹಿನ್ನೀರಿನಲ್ಲಿ ತೆಪ್ಪ ಮುಳುಗಿ ಒಂದೇ ಕುಟುಂಬದ 6 ಜನರು ಮೃತಪಟ್ಟ ಅಹಿತಕರ ಘಟನೆ ನಡೆದಿದ್ದು, ಆ ಕುಟುಂಬದ ವರ್ಗದವರಿಗೆ ಸರ್ಕಾರದಿಂದ ಏನು ಪರಿಹಾರ ನೀಡಬೇಕಾಗಿದೆ, ಅದನ್ನು ಸರ್ಕಾರದಿಂದ ನೀಡಲು ಕ್ರಮ ಕೈಗೊಳ್ಳುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

**6.ಜಂಟಿ ಪರಿಶೀಲನಾ ಸಮಿತಿಯ ಕಾಲಾವಕಾಶವನ್ನು ವಿಸ್ತರಿಸುವ ಪ್ರಸ್ತಾವ**

01) ದಿನಾಂಕ:31.12.2014ರವರೆಗೆ ವಿಸ್ತರಿಸಲಾಗಿದ್ದ 2013ನೇ ಸಾಲಿನ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕದ ಬಗ್ಗೆ ರಚಿಸಲಾಗಿರುವ ಜಂಟಿ ಪರಿಶೀಲನಾ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ದಿನಾಂಕ:31.03.2015ರವರೆಗೆ ವಿಸ್ತರಿಸುವ ಪ್ರಸ್ತಾವನೆಯನ್ನು ಸಭಾನಾಯಕರು ಮಂಡಿಸಿದರು.

ಮಾನ್ಯ ಸಭಾಪತಿಯವರು ಮಾನ್ಯ ಸಭಾನಾಯಕರು ಮಂಡಿಸಿರುವ ಪ್ರಸ್ತಾವಕ್ಕೆ ಸದನದ ಸಹಮತಿ ಇದೆಯೆಂದು ಭಾವಿಸುವುದಾಗಿ ಪ್ರಕಟಿಸಿದರು.

**7.ವಿಶೇಷ ಜಂಟಿ ಸದನ ಸಮಿತಿಗಳ ಕಾಲಾವಕಾಶವನ್ನು ವಿಸ್ತರಿಸಲು ಪ್ರಸ್ತಾವ**

01) ದಿನಾಂಕ:31.12.2014ರವರೆಗೆ ವಿಸ್ತರಿಸಲಾಗಿದ್ದ "ಹೊರ ರಾಜ್ಯದ ಹಾಗೂ ರಾಜ್ಯದ ಗಡಿ ಭಾಗಗಳಲ್ಲಿ ನೆಲೆಸಿರುವ ಕನ್ನಡಿಗರ ಶೈಕ್ಷಣಿಕ ಹಾಗೂ ಸಾಂಕ್ಕೃತಿಕ ಅವಶ್ಯಕತೆಗಳ ಕುರಿತು" ಪರಿಶೀಲಿಸಿ ವರದಿ ನೀಡಲು ಮಾನ್ಯ ಸಭಾಪತಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ವಿಶೇಷ ಜಂಟಿ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ದಿನಾಂಕ:31.03.2015ರವರೆಗೆ ವಿಸ್ತರಿಸುವ ಪ್ರಸ್ತಾವ ಮಂಡಿಸಲಾಯಿತು.

ಮಾನ್ಯ ಸಭಾಪತಿಯವರು ಮಾನ್ಯ ಸಭಾನಾಯಕರು ಮಂಡಿಸಿರುವ ಪ್ರಸ್ತಾವಕ್ಕೆ ಸದನದ ಸಹಮತಿ ಇದೆಯೆಂದು ಭಾವಿಸುವುದಾಗಿ ಪ್ರಕಟಿಸಿದರು.

02) ದಿನಾಂಕ:31.12.2014ರವರೆಗೆ ವಿಸ್ತರಿಸಲಾಗಿದ್ದ **"**ಕರ್ನಾಟಕ ರಾಜ್ಯದಲ್ಲಿ ಅನುಷ್ಠಾನದಲ್ಲಿರುವ ವಿವಿಧ ರೈಲ್ವೆ ಯೋಜನೆಗಳನ್ನು ಕಾಲಬದ್ಧವಾಗಿ ಪೂರ್ಣಗೊಳಿಸುವ ಬಗ್ಗೆ ಪರಿಶೀಲಿಸಿ ವರದಿ ನೀಡಲು ಮಾನ್ಯ ಸಭಾಪತಿಯವರ ಅಧ್ಯಕ್ಷತೆಯಲ್ಲಿ ಚರ್ಚಿಸಲಾಗಿರುವ ವಿಶೇಷ ಜಂಟಿ ಸದನ ಸಮಿತಿಯು ದಿನಾಂಕ:03.03.2015ರವರೆಗೆ ವಿಸ್ತರಿಸುವ ಪ್ರಸ್ತಾವನೆಯನ್ನು ಮಾನ್ಯ ಸಭಾನಾಯಕರು ಮಂಡಿಸಿದರು.

ಮಾನ್ಯ ಸಭಾಪತಿಯವರು ಮಾನ್ಯ ಸಭಾನಾಯಕರು ಮಂಡಿಸಿರುವ ಪ್ರಸ್ತಾವಕ್ಕೆ ಸದನದ ಸಹಮತಿ ಇದೆಯೆಂದು ಭಾವಿಸುವುದಾಗಿ ಪ್ರಕಟಿಸಿದರು.

**ಶ್ರೀ ಗೋ.ಮಧುಸೂದನ್** ಅವರು ನಿಯಮ 307ರಡಿಯಲ್ಲಿ ನೀಡಿರುವ ಸೂಚನೆಯನ್ನು ತೆಗೆದುಕೊಳ್ಳುವಂತೆ ಕೋರಿದರು.

ಇದನ್ನು ಪರಿಶೀಲಿಸಿ ತೀರ್ಮಾನ ಪ್ರಕಟಿಸುವುದಾಗಿ ಮಾನ್ಯ ಸಭಾಪತಿಯವರು ತಿಳಿಸಿದರು.

ಮಾನ್ಯ ವಿರೋಧ ಪಕ್ಷದ ನಾಯಕರು ತಾವು ದಿನಾಂಕ:16.12.2014ರಂದು ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ರಾಜ್ಯ ಸರ್ಕಾರದಲ್ಲಿನ ಭ್ರಷ್ಟತೆ, ವೈಪಲ್ಯಗಳು ಅವ್ಯವಹಾರಗಳು ಹಾಗೂ ಜವಾಬ್ದಾರಿಯ ಸ್ಥಾನದಲ್ಲಿರುವ ಅನೇಕ ಮಂತ್ರಿಗಳ ಮೇಲಿನ ಹಗರಣಗಳ ಬಗ್ಗೆ ರಾಜ್ಯದ ಜನತೆ ಈ ಸರ್ಕಾರದಲ್ಲಿ ವಿಶ್ವಾಸ ಕಳೆದುಕೊಂಡಿರುವ ಗಂಭೀರವಾದ ವಿಷಯದ ಬಗ್ಗೆ ನಿಯಮ 59ರಡಿ ಚರ್ಚಿಸಲು ಅವಕಾಶ ಕೋರಿದರು.

ಮಾನ್ಯ ಸಭಾನಾಯಕರು ನಿಯಮ 307ರಡಿಯಲ್ಲಿ ಪರಿಶೀಲಿಸಿ ಇದು ಒಬ್ಬ ನಿರ್ದಿಷ್ಟ ಮಂತ್ರಿಯ ಕುರಿತು, ನಿರ್ಧಿಷ್ಟ ವಿಷಯಕ್ಕೆ ಕುರಿತು ಪ್ರಸ್ತಾಪವಾಗಿರುವುದರಿಂದ ನಿಯಮ 59ರಡಿಯಲ್ಲಿ ಚರ್ಚಿಸಲು ಬರುವುದಿಲ್ಲವೆಂದು ಅವಕಾಶ ನೀಡಲು ಸಾಧ್ಯವಿಲ್ಲವೆಂದು ತಿಳಿಸಿದರು.

ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿ ಈ ವಿಷಯನ್ನು ನಿಯಮ 59ರಡಿಯಲ್ಲಿ ಚರ್ಚಿಸಲು ಅವಕಾಶ ನೀಡದಿರುವುದರಿಂದ ಸಭಾತ್ಯಾಗ ಮಾಡುತ್ತಿರುವುದಾಗಿ ತಿಳಿಸಿ ಎಲ್ಲಾ ವಿರೋಧ ಪಕ್ಷದ ಸದಸ್ಯರುಗಳು ಸದನದಿಂದ ಹೊರನಡೆದರು.

**8.ಪ್ರಕಟಣೆ**

ಮಾನ್ಯ ಸಭಾಪತಿಯವರು ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನಸಭೆಯು ದಿನಾಂಕ:16.12.2014ರಂದು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿತೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಮಾನ್ಯ ಸಭಾಧ್ಯಕ್ಷರಿಂದ ಸಂದೇಶ ಬಂದಿರುವುದಾಗಿ ಪ್ರಕಟಿಸಿದರು.

01) ಕರ್ನಾಟಕ ಭೂ ಸುಧಾರಣೆ ಮತ್ತು ಇತರೆ ಕೆಲವು ಕಾನೂನು (ತಿದ್ದುಪಡಿ) ವಿಧೇಯಕ, 2014

02) ಭಾರತ ಉತ್ತರಾಧಿಕಾರ (ಕರ್ನಾಟಕ ತಿದ್ದುಪಡಿ) ವಿಧೇಯಕ, 2014

03) ಕರ್ನಾಟಕ ನ್ಯಾಯಾಲಯಗಳ ಶುಲ್ಕಗಳು ಮತ್ತು ದಾವೆಗಳ ಮೌಲ್ಯ ನಿರ್ಣಯ(ತಿದ್ದುಪಡಿ) ವಿಧೇಯಕ,2014

04) ಕರ್ನಾಟಕ ಪೌರಸಭೆಗಳು ಮತ್ತು ಇತರೆ ಕೆಲವು ಕಾನೂನು (ತಿದ್ದುಪಡಿ) ವಿಧೇಯಕ, 2014

## 9.ಉತ್ತರ ಕರ್ನಾಟಕದ ಸರ್ವತೋಮುಖ ಅಭಿವೃದ್ಧಿಗೆ ಸಂಬಂಧಿಸಿದಂತೆ ವಿಶೇಷ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ

01) ಶ್ರೀ ಮತ್ತಿಕಟ್ಟಿ ವೀರಣ್ಣ

**ಶ್ರೀ ಕೆ.ಬಿ.ಶಾಣಪ್ಪ** ಅವರು ಮಾತನಾಡಿ ವಿರೋಧ ಪಕ್ಷದವರು ಸಭಾತ್ಯಾಗ ಮಾಡಿರುವುದರಿಂದ ಚರ್ಚೆಗೆ ಅವಕಾಶ ನೀಡದೆ ಮಾನ್ಯ ಸದಸ್ಯರುಗಳನ್ನು ಕರೆದು ಮಾತನಾಡಬೇಕೆಂದು ತಿಳಿಸಿ ಸದನವನ್ನು ಮುಂದೂಡಬೇಕೆಂದು ಮಾನ್ಯ ಸಭಾಪತಿಯವರನ್ನು ಕೋರಿದರು.

ಅದರಂತೆ ಸಂಜೆ:4.19ರಿಂದ ಸದನವನ್ನು 10 ನಿಮಿಷಗಳ ಕಾಲ ಮುಂದೂಡಿರುವುದಾಗಿ ಮಾನ್ಯ ಸಭಾಪತಿಯವರು ತಿಳಿಸಿದರು.

ಸದನವು ಪುನ: ಸಂಜೆ:5.04 ಗಂಟೆಗೆ ಮಾನ್ಯ ಸಭಾಪತಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

ಉತ್ತರ ಕರ್ನಾಟಕದ ಸರ್ವತೋಮುಖ ಅಭಿವೃದ್ಧಿಗೆ ಸಂಬಂಧಿಸಿದಂತೆ ವಿಶೇಷ ಚರ್ಚೆ ಪ್ರಾರಂಭವಾಯಿತು.

ಈ ಕೆಳಕಂಡ ಸದಸ್ಯರುಗಳು ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದರು.

**ಶ್ರೀಯುತರುಗಳಾದ:**

01) ಕೆ.ಎಸ್.ಈಶ್ವರಪ್ಪ (ಮಾನ್ಯ ವಿರೋಧ ಪಕ್ಷದ ನಾಯಕರು)

02) ಮತ್ತಿಕಟ್ಟಿ ವೀರಣ್ಣ

ಸಂಜೆ:5.54 ಗಂಟೆಗೆ ಮಾನ್ಯ ಉಪ ಸಭಾಪತಿಯವರು ಸಭಾಪತಿಯವರ ಪೀಠದಲ್ಲಿ ಉಪಸ್ಥಿತರಿದ್ದರು.

03) ಎನ್.ಎಸ್.ಭೋಸರಾಜು

ಸಂಜೆ:6.53 ಗಂಟೆಗೆ ಮಾನ್ಯ ಸಭಾಪತಿಯವರು ಪೀಠದಲ್ಲಿ ಉಪಸ್ಥಿತರಿದ್ದರು.

ಸದನವನ್ನು ರಾತ್ರಿ:7.04 ಗಂಟೆಯಿಂದ ದಿನಾಂಕ:18.12.2014ರಂದು ಬೆಳಗ್ಗೆ:10.00 ಗಂಟೆಯವರೆಗೆ ಮುಂದೂಡಿರುವುದಾಗಿ ಮಾನ್ಯ ಸಭಾಪತಿಯವರು ಪ್ರಕಟಿಸಿದರು.

**ವಿ.ಶ್ರೀಶ್**
**ಕಾರ್ಯದರ್ಶಿ**

**ಕರ್ನಾಟಕ ವಿಧಾನ ಪರಿಷತ್ತು**

**ನೂರ ಇಪ್ಪತ್ತಾರನೇ ಅಧಿವೇಶನ**

**ಲಘು ಪ್ರಕಟಣೆ ಭಾಗ – 1**

**ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ**

**ಗುರುವಾರ, ದಿನಾಂಕ: 18.12.2014**

(8)

ಸದನವು ಬೆಳಗ್ಗೆ:10.21 ಗಂಟೆಗೆ ಮಾನ್ಯ ಸಭಾಪತಿ **(ಶ್ರೀ ಡಿ.ಹೆಚ್.ಶಂಕರಮೂರ್ತಿ)** ಅವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

**1.ಪ್ರಶ್ನೋತ್ತರ**

**ಸಮೂಹ–IV ಪಟ್ಟಿ– 8 ರ ಈ ಕೆಳಕಂಡ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು;**

| | | |
|---|---|---|
| 01 | 106(1157) | ಉತ್ತರಿಸಲಾಯಿತು |
| 02 | 107(1243) | ಉತ್ತರಿಸಲಾಯಿತು |
| 03 | 108(1164) | ಉತ್ತರಿಸಲಾಯಿತು |
| 04 | 109(1172) | ಉತ್ತರಿಸಲಾಯಿತು |
| 05 | 110(1221) | ಕಾಲಾವಕಾಶ |
| 06 | 111(1235) | ಗೈರುಹಾಜರಾಗಿರುತ್ತಾರೆ |
| 07 | 112(1177) | ಉತ್ತರಿಸಲಾಯಿತು |
| 08 | 113(1153) | ಉತ್ತರಿಸಲಾಯಿತು |
| 09 | 114(1199) | ಕಾಲಾವಕಾಶ |
| 10 | 115(1138) | ಉತ್ತರಿಸಲಾಯಿತು |
| 11 | 116(1184) | ಉತ್ತರಿಸಲಾಯಿತು |

| | | |
|---|---|---|
| 12 | 117(1261) | ಉತ್ತರಿಸಲಾಯಿತು |
| 13 | 118(1265) | ಉತ್ತರಿಸಲಾಯಿತು |
| 14 | 119(1187) | ಉತ್ತರಿಸಲಾಯಿತು |
| 15 | 120(1142) | ಉತ್ತರಿಸಲಾಯಿತು |

**ಸಮೂಹ–IV ಪಟ್ಟಿ –8ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 138 ಪ್ರಶ್ನೆಗಳ ಪೈಕಿ 101 ಪ್ರಶ್ನೆಗಳಿಗೆ ಉತ್ತರವನ್ನು ಮಾನ್ಯ ಸಭಾನಾಯಕರು ಸದನದಲ್ಲಿ ಮಂಡಿಸಿದರು.**

**2.ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು**

ಕಾರ್ಯದರ್ಶಿಯವರು ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸಿದರು.

01) ಕರ್ನಾಟಕ ಭೂ ಸುಧಾರಣೆ ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ವಿಧೇಯಕ, 2014
02) ಭಾರತ ಉತ್ತರಾಧಿಕಾರ (ಕರ್ನಾಟಕ ತಿದ್ದುಪಡಿ) ವಿಧೇಯಕ, 2014
03) ಕರ್ನಾಟಕ ನ್ಯಾಯಾಲಯ ಶುಲ್ಕಗಳು ಮತ್ತು ದಾವೆಗಳ ಮೌಲ್ಯ ನಿರ್ಣಯ (ತಿದ್ದುಪಡಿ) ವಿಧೇಯಕ,2014
04) ಕರ್ನಾಟಕ ಪೌರಸಭೆಗಳು ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ವಿಧೇಯಕ, 2014
05) ಮಾನ್ಯ ಸದಸ್ಯರುಗಳಿಗೆ ಈಗಾಗಲೇ ಒದಗಿಸಲಾಗಿರುವ ನಾಲ್ಕನೇ ಹಾಗೂ ಐದನೇ ಪಟ್ಟಿಗಳ ರೀತ್ಯಾ.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ ಮಾನ್ಯ ಸಭಾನಾಯಕರು ಅವರ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಮಂಡಿಸಿದರು.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು) ಅವರು ಅವರ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಮಂಡಿಸಿದರು.

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ ಮಾನ್ಯ ಸಭಾನಾಯಕರು ಅವರ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಮಂಡಿಸಿದರು.

ಮಾನ್ಯ ಮೂಲಭೂತ ಸೌಲಭ್ಯ ಅಭಿವೃದ್ಧಿ ಹಾಗೂ ವಾರ್ತಾ ಮತ್ತು ಹಜ್ ಸಚಿವರು ಅವರು ಅವರ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಮಂಡಿಸಿದರು.

ನಗರಾಭಿವೃದ್ಧಿ ಸಚಿವರ ಪರವಾಗಿ ಮಾನ್ಯ ಸಭಾನಾಯಕರು ಅವರ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಮಂಡಿಸಿದರು.

## 3.ಶೂನ್ಯವೇಳೆ

**01) ಶ್ರೀ ಎಸ್.ವ್ಹಿ.ಸಂಕನೂರ** ಅವರು ಅಂಗವಿಕಲರ ವಸತಿ ನಿಲಯಗಳಿಗೆ ಅಕ್ಕಿ ಗೋದಿ ಪೂರೈಕೆಯನ್ನು ಬಿ.ಪಿ.ಎಲ್ ದರದಲ್ಲಿ ಸ್ಥಗಿತಗೊಳಿಸಿರುವ ಬಗ್ಗೆ ಪ್ರಸ್ತಾಪಿಸಿದರು.

ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

**02) ಶ್ರೀ ಅಶ್ವಥನಾರಾಯಣ** ಅವರು ಬೆಂಗಳೂರಿನ ವಿಜಯನಗರದ ಹಂಪಿನಗರ ವ್ಯಾಪ್ತಿಯ ಕ.ವಿ.ಕಾ ಬಡಾವಣೆ ನಿವೇಶನದಾರರಿಗೆ ಮೆಟ್ರೋಯೋಜನೆಯಿಂದ ಪರಿಹಾರ ನೀಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

**03) ಶ್ರೀ ಎಸ್.ನಾಗರಾಜು (ಸಂದೇಶ್ ನಾಗರಾಜು)** ಅವರು ಟಿ.ನರಸೀಪುರ ತಾಲ್ಲೂಕು, ಸೋಸಲೆ ಗ್ರಾಮದ ಮುಖ್ಯರಸ್ತೆ ತಿರುವಿನಲ್ಲಿ ಒಕ್ಕಣೆ ಯಂತ್ರವು ಮಗುಚಿ ಬಿದ್ದು ವಾಹನದಲ್ಲಿದ್ದ 9 ಕೂಲಿ ಮಂದಿಯಲ್ಲಿ 6 ಕೂಲಿ ಕಾರ್ಮಿಕರು ಮೃತರಾಗಿರುವುದರಿಂದ ಪರಿಹಾರ ನೀಡಬೇಕೆಂದು ಪ್ರಸ್ತಾಪಿಸಿದರು.

ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು

**04) ಶ್ರೀ ಅಮರನಾಥ ಪಾಟೀಲ್** ಅವರು ಬಳ್ಳಾರಿ, ಕೊಪ್ಪಳ ಜಿಲ್ಲೆಯಲ್ಲಿ ಬಿದ್ದ ಅಕಾಲಿಕ ಮಳೆಯಿಂದಾಗಿ ರೈತರು ಬೆಳೆದ ಬೆಳೆಗೆ ನಷ್ಟ ಪರಿಹಾರ ನೀಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

**05) ಶ್ರೀ ಅರುಣ ಶಹಾಪೂರ** ಅವರು ಖಾಸಗಿ ಪ್ರಾಥಮಿಕ ಶಾಲೆಗಳಿಗೆ ಸರ್ಕಾರ ವಿವಿಧ ಷರತ್ತುಗಳನ್ನು ವಿಧಿಸಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

ಮಾನ್ಯ ಮರಿತಿಬ್ಬೇಗೌಡ ಅವರು ನಿಯಮ 59ರ ಅಡಿಯಲ್ಲಿ ಅರಣ್ಯ ಜಾಗ ಒತ್ತುವರಿಯಾಗಿರುವ ಕುರಿತು ನೀಡಿರುವ ನಿಲುವಳಿ ಸೂಚನೆಯನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಕೋರಿದರು.

ಮಾನ್ಯ ಸಭಾಪತಿಯವರು ನಾಳೆ ನಿಯಮ 68ರ ಅಡಿಯಲ್ಲಿ ಚರ್ಚಿಸಲು ಅವಕಾಶ ನೀಡುವುದಾಗಿ ತಿಳಿಸಿದರು.

06) ದಿನಾಂಕ:16.12.2014ರಂದು **ಶ್ರೀಮತಿ ತಾರಾಅನೂರಾಧ** ಅವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲಾಗಿದ್ದ ವಿಷಯ ಬೆಳಗಾವಿ ಅಧಿವೇಶನಕ್ಕೆ ಸಾವಿರಾರು ಪೊಲೀಸ್ ಸಿಬ್ಬಂಧ್ಧಿಗಳನ್ನು ಹಾಗೂ ಗರ್ಭಿಣಿ ಮಹಿಳಾ ಪೊಲೀಸ್ ಸಿಬ್ಬಂಧ್ಧಿಗಳನ್ನು ನಿಯೋಜಿಸಿದ್ದು ಅವರಿಗೆ ಸರಿಯಾದ ವಾಸ್ತವ್ಯ, ಊಟ, ಶೌಚಾಲಯ ವ್ಯವಸ್ಥೆ ಇಲ್ಲದಿರುವ ಕುರಿತು. ಮಾನ್ಯ ಗೃಹ ಸಚಿವರು ಉತ್ತರಿಸಿದರು.

07) ದಿನಾಂಕ:16.12.2014ರಂದು **ಶ್ರೀ ಅಮರನಾಥ ಪಾಟೀಲ್** ಅವರು ಪ್ರಸ್ತಾಪಿಸಿದ್ದ ವಿಷಯ ರೈಲ್ವೆ ಇಲಾಖೆಯಿಂದ ಯೋಜನೆಗಳು ಮಂಜೂರಾಗಿ ಕಾಮಗಾರಿಗಳು ಪ್ರಾರಂಭವಾಗಿದ್ದು ಕಲಬುರುಗಿ ಜಿಲ್ಲೆಯ ವಿಭಾಗೀಯ ರೈಲ್ವೆ  ಕಾರ್ಯ ಹಾಗೂ ಬೀದರ ಕಲಬರುಗಿ ಮಾರ್ಗ

ಕಲಬುರುಗಿ ನಗರದ ಮೇಲು ಸೇತುವೆ ಹಾಗೂ ಇತರೆ ಯೋಜನೆಗಳು ಸ್ಥಗಿತ ಗೊಂಡಿರುವ ವಿಷಯಕ್ಕೆ. ಮಾನ್ಯ ಮೂಲಭೂತ ಸೌಲಭ್ಯಅಭಿವೃದ್ಧಿ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಸಚಿವರು ಉತ್ತರಿಸಿದರು.

**4.ಶಾಸನ ರಚನೆ**

**ವಿಧೇಯಕವನ್ನು ಪರ್ಯಾಲೋಚಿಸಿರುವುದು ಹಾಗೂ ಅಂಗೀಕರಿಸುವುದು**

**ಶ್ರೀ ಟಿ.ಬಿ.ಜಯಚಂದ್ರ** (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು) ಅವರು ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವ ವಿದ್ಯಾನಿಲಯ (ತಿದ್ದುಪಡಿ) ವಿಧೇಯಕ 2014ನ್ನು ಪರ್ಯಾಲೋಚಿಸಬೇಕೆಂದು ಸೂಚಿಸಿದರು.

ಈ ಕೆಳಕಂಡ ಸದಸ್ಯರುಗಳು ಮಾತನಾಡಿದರು.

**ಶ್ರೀಯುತರುಗಳಾದ:**

01) ಮರಿತಿಬ್ಬೇಗೌಡ
02) ವೈ.ಎ.ನಾರಾಯಣಸ್ವಾಮಿ
03) ರಾಮಚಂದ್ರಗೌಡ
04) ಪುಟ್ಟಣ್ಣ (ಮಾನ್ಯ ಉಪ ಸಭಾಪತಿಗಳು)
05) ಕ್ಯಾಪ್ಟನ್ ಗಣೇಶ್ ಕಾರ್ಣಿಕ್
06) ಅರುಣ ಶಹಾಪೂರ
07) ಪ್ರೊ: ಪಿ.ವಿ. ಕೃಷ್ಣಭಟ್
08) ಚೌಡರೆಡ್ಡಿ ತೂಪಲ್ಲಿ
09) ಎಂ.ಆರ್.ಹುಲಿನಾಯ್ಕರ್

10) ವಿ.ಎಸ್.ಉಗ್ರಪ್ಪ
11) ಐವನ್ 'ಡಿ ಸೋಜ
12) ಧರ್ಮಸೇನ

ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಸ್ಪಷ್ಟೀಕರಣ ನೀಡಿದರು.

ಮಾನ್ಯ ವಿರೋಧ ಪಕ್ಷದ ನಾಯಕರು ವಿಧೇಯಕವನ್ನು ಮತಕ್ಕೆ ಹಾಕಬೇಕೆಂದು ಕೋರಿದರು.

ಚರ್ಚೆಯನ್ನು ಭೋಜನ ವಿರಾಮದ ನಂತರ ಮುಂದುವರಿಸುವುದಾಗಿ ತಿಳಿಸಿ ಮಧ್ಯಾಹ್ನ:2.28ರಿಂದ ಮಧ್ಯಾಹ್ನ:3.30ರವರೆಗೆ ಸದನವನ್ನು ಮುಂದೂಡಲಾಯಿತು.

ಸದನವು ಪುನ: ಸಂಜೆ:5.15 ಗಂಟೆಗೆ ಮಾನ್ಯ ಸಭಾಪತಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

ನಿಯಮ 307ರಡಿಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ನೀಡಿರುವ ಸೂಚನೆಯನ್ನು ಪ್ರಾರಂಭಿಸಲು ಮಾನ್ಯ ಸಭಾಪತಿಯವರು ಅನುಮತಿಸಿದರು.

ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು (**ಶ್ರೀ ಮಹಾದೇವ ಪ್ರಸಾದ್**) ಅವರು ಸುಳ್ಳು ದಾಖಲೆಗಳನ್ನು ನೀಡಿ ಕೆ.ಹೆಚ್.ಬಿ.ಚಾಮರಾಜನಗರ ಇಲ್ಲಿ ನಿವೇಶನ ಪಡೆದಿರುವುದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪಿಸಿದರು.

ಮಾನ್ಯ ಸಭಾನಾಯಕರು Point of order ತಂದು ಈ ವಿಷಯವು ನಿಯಮ 306ರಡಿ ಪ್ರಸ್ತಾಪಿಸಿ ಈ ವಿಷಯವು ನ್ಯಾಯಾಲಯದ ಮುಂದೆ ಇರುವುದರಿಂದ ಇದನ್ನು ನಿಯಮ 307ರಡಿಯಲ್ಲಿ ತೆಗೆದುಕೊಳ್ಳಲು ಬರುವುದಿಲ್ಲವೆಂದು ಇದಕ್ಕೆ ಅವಕಾಶ ನೀಡಬಾರದೆಂದು ಕೋರಿದರು.

**ಮಾನ್ಯ ಶ್ರೀ ಆರ್.ಕೆ.ಸಿದ್ದರಾಮಣ್ಣ** ಅವರು ಮಾತನಾಡಿ ನಿಯಮ 306ರಡಿ ಸದರಿ ವಿಷಯವು ನ್ಯಾಯಾಲಯದಲ್ಲಿ ಇರುವುದರಿಂದ ನಿಯಮ 307ರಡಿ ತೆಗೆದುಕೊಳ್ಳಲು ಬರುವುದಿಲ್ಲವೆಂದು ಪ್ರಸ್ತಾಪಿಸದಿರು.

ಈ ವಿಷಯದ ಕುರಿತು ಮಾನ್ಯ ಸಭಾನಾಯಕರು ನೀಡಿರುವ ನ್ಯಾಯಾಲಯದಲ್ಲಿರುವ ದಸ್ತಾವೇಜುಗಳನ್ನು ಪರಿಶೀಲಿಸಿದ ನಂತರ ತೀರ್ಮಾನ ತೆಗೆದುಕೊಳ್ಳುವುದಾಗಿ ಮಾನ್ಯ ಸಭಾಪತಿಯವರು ತಿಳಿಸಿದರು.

**ಮಾನ್ಯ ಶ್ರೀ ವಿ.ಎಸ್.ಉಗ್ರಪ್ಪ** ಅವರು ಮಾತನಾಡಿ ನಿಯಮ 307ರಡಿ ಸೂಚನೆ ನೀಡುವ ಬದಲು ನಿಯಮ 330 ಅಥವಾ ನಿಯಮ 68ರಡಿ ನೀಡಬೇಕೆಂದು ಪ್ರಸ್ತಾಪಿಸಿದರು.

**ಮಾನ್ಯ ಶ್ರೀ ಅಶ್ವಥನಾರಾಯಣ** ಅವರು ನಿಯಮ 307ರಡಿ ನೀಡಿರು ವಿಷಯವು ಭೂ ಒತ್ತುವರಿ ಮಾಡಿರುವ ಕುರಿತದಾಗಿದ್ದು, ನಿಯಮ 307ರಡಿ ಕಂದಾಯ ಮಂತ್ರಿಗಳಿಗೆ ಸೂಚನಾ ಪತ್ರವನ್ನು ನೀಡಿರುವುದಿಲ್ಲವೆಂದು ಮಾನ್ಯ ಸಭಾನಾಯಕರು ಕ್ರಿಯಾಲೋಪ (Point of order) ತಂದರು.

ಇದನ್ನು ಪರಿಶೀಲಿಸುವುದಾಗಿ ಮಾನ್ಯ ಸಭಾಪತಿಯವರು ತಿಳಿಸಿದರು.

**ಮಾನ್ಯ ಶ್ರೀ ಗೋ.ಮಧುಸೂದನ್** ಅವರು ನಿಯಮ 307ರಡಿ ಮಾನ್ಯ **ಶ್ರೀ ಖಮರ್ ಇಸ್ಲಾಂ** (ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು) ಅವರ ಮೇಲೆ ನೀಡಿರುವ ವಿಷಯವು ನ್ಯಾಯಾಲಯದ ಮುಂದಿರುವುದಾಗಿ ಸಭಾನಾಯಕರು Point of order ತಂದರು.

ಇದನ್ನು ಪರಿಶೀಲಿಸುವುದಾಗಿ ಮಾನ್ಯ ಸಭಾಪತಿಯವರು ತಿಳಿಸಿದರು.

ಶ್ರೀ ವಿ.ಎಸ್.ಉಗ್ರಪ್ಪ ಅವರು ನಿಯಮ 307ರಡಿ ನೀಡಿರುವ ವಿಷಯವು ನ್ಯಾಯಾಲಯದ ಮುಂದೆ ಇರುವುದರಿಂದ ಇದನ್ನು ಪರಿಶೀಲಿಸುವುದಾಗಿ ಮಾನ್ಯ ಸಭಾಪತಿಯವರು ತಿಳಿಸಿದರು. ಇದರಿಂದ ಗದ್ದಲ ಉಂಟಾಯಿತು.

ಸದನವನ್ನು ಸಂಜೆ:5.49 ಗಂಟೆಯಿಂದ 10 ನಿಮಿಷಗಳ ಕಾಲ ಮುಂದೂಡಿರುವುದಾಗಿ ಮಾನ್ಯ ಸಭಾಪತಿಯವರು ತಿಳಿಸಿದರು.

ಸದನವು ಪುನ: ಸಂಜೆ:6.17 ಗಂಟೆಗೆ ಮಾನ್ಯ ಸಭಾಪತಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

**ಶಾಸನ ರಚನೆ**

**ಶ್ರೀ ಶ್ರೀನಿವಾಸ್ ಪ್ರಸಾದ್** (ಮಾನ್ಯ ಕಂದಾಯ ಸಚಿವರು) ಅವರು ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ "ಕರ್ನಾಟಕ ಭೂ ಸುಧಾರಣೆ ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ವಿಧೇಯಕ, 2014ರನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಕೋರಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀರಿಸಲಾಯಿತು.

**5. ವರದಿಗಳನ್ನೊಪ್ಪಿಸುವುದು**

**ಶ್ರೀಮತಿ ಮೋಟಮ್ಮ** (ಸದಸ್ಯರು, ಕರ್ನಾಟಕ ವಿಧಾನ ಮಂಡಲದ ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿ) ಅವರು ಕರ್ನಾಟಕ ವಿಧಾನ ಮಂಡಲದ ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಯ 2014–15ನೇ ಸಾಲಿನ ಆರ್ಥಿಕ ಇಲಾಖೆಗೆ ಸಂಬಂಧಿಸಿದ ಹೊಸ ಸೇವೆಗಳು/ಹೊಸ ಸೇವಾ ಸಾಧನಗಳಿಗೆ ಆರ್ಥಿಕ ಮಾನದಂಡಗಳ ಪರಿಷ್ಕರಣೆಯ ಬಗ್ಗೆ ಸಮಿತಿಯ ಶಿಫಾರಸ್ಸುಗಳನ್ನೊಳಗೊಂಡ 4ನೇ ವರದಿಯನ್ನು ಒಪ್ಪಿಸಿದರು.

**ಶ್ರೀ ಹೆಚ್.ಎಂ.ರೇವಣ್ಣ,** (ಸದಸ್ಯರು, ಕರ್ನಾಟಕ ವಿಧಾನಮಂಡಲದ ಸಾರ್ವಜನಿಕ ಉದ್ಯಮಗಳ ಸಮಿತಿ) ಅವರು ಕರ್ನಾಟಕ ವಿಧಾನ ಮಂಡಲದ ಸಾರ್ವಜನಿಕ ಉದ್ಯಮಗಳ ಸಮಿತಿಯ 2014ನೇ ಸಾಲಿನ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮಕ್ಕೆ ಸಂಬಂಧಿಸಿದ ಸಮಿತಿಯ 130ನೇ ವರದಿಯನ್ನು ಒಪ್ಪಿಸಿದರು.

ಸದನವನ್ನು ಸಂಜೆ:6.27 ಗಂಟೆಯಲ್ಲಿ ಮುಂದೂಡಿ ದಿನಾಂಕ:19.12.2014ರಂದು ಬೆಳಗ್ಗೆ:10.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು ಪ್ರಕಟಿಸಿದರು.

**ವಿ.ಶ್ರೀಶ್**
**ಕಾರ್ಯದರ್ಶಿ**

**ಕರ್ನಾಟಕ ವಿಧಾನ ಪರಿಷತ್ತು**
**ನೂರ ಇಪ್ಪತ್ತಾರನೇ ಅಧಿವೇಶನ**
**ಲಘು ಪ್ರಕಟಣೆ ಭಾಗ – 1**
**ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ**
**ಶುಕ್ರವಾರ, ದಿನಾಂಕ: 19.12.2014**
(9)

ಸದನವು ಬೆಳಗ್ಗೆ:10.26 ಗಂಟೆಗೆ ಮಾನ್ಯ ಸಭಾಪತಿ **(ಶ್ರೀ ಡಿ.ಹೆಚ್.ಶಂಕರಮೂರ್ತಿ)** ಅವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

**ಶ್ರೀ ಗೋ.ಮಧುಸೂದನ್** ಅವರು ದಿನಾಂಕ:18.12.2014ರಂದು ಕೊಟ್ಟಿರುವ ನಿಯಮ 307ರ ಡಿಯಲ್ಲಿ ಮಾನ್ಯ ಸಚಿವರಾದ **ಶ್ರೀ ಖಮರಲ್ ಇಸ್ಲಾಂ** (ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು) ಅವರು ವಕ್ಫ್ ಆಸ್ತಿ ಕಬಳಿಕೆ ಕುರಿತ ವಿಷಯಕ್ಕೆ ಸಂಬಂಧಿಸಿದ ಸೂಚನೆಯನ್ನು ತೆಗೆದುಕೊಳ್ಳುವಂತೆ ಪ್ರಸ್ತಾಪಿಸಿದರು.

ಮಾನ್ಯ ಸಭಾಪತಿಯವರು ಪ್ರಶ್ನೋತ್ತರದ ನಂತರ ಅವಕಾಶ ನೀಡುವುದಾಗಿ ತಿಳಿಸಿದರು.

ವಿರೋಧ ಪಕ್ಷದ ಸದಸ್ಯರುಗಳು ಚರ್ಚೆಗೆ ಈಗಲೇ ಅವಕಾಶ ನೀಡಬೇಕೆಂದು ಕೋರಿದರು. ಇದನ್ನು ಸಭಾನಾಯಕರು ಹಾಗೂ ಆಡಳಿತ ಪಕ್ಷದ ಸದಸ್ಯರುಗಳು ವಿರೋಧಿಸಿದರು ಮಾನ್ಯ ಸಭಾಪತಿಯವರು

ನೀಡಿದಂತಹ ತೀರ್ಪಿಗೆ ವಿರೋಧ ಪಕ್ಷದವರು ವಿರೋಧಿಸಿರುವುದನ್ನು ಖಂಡಿಸಿರುವುದಾಗಿ ಸಭಾನಾಯಕರು ತಿಳಿಸಿದರು. ಇದರಿಂದ ಗೊಂದಲ ಉಂಟಾಯಿತು.

ಸದನವನ್ನು ಬೆಳಗ್ಗೆ:11.00 ಗಂಟೆಯಿಂದ 10 ನಿಮಿಷಗಳವರೆಗೆ ಮುಂದೂಡಿರುವುದಾಗಿ ಸಭಾಪತಿಯವರು ತಿಳಿಸಿದರು.

ಸದನವು ಪುನ: ಮಧ್ಯಾಹ್ನ:1.07 ಗಂಟೆಗೆ ಮಾನ್ಯ ಸಭಾಪತಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

ಮಾನ್ಯ ಸಭಾಪತಿಯವರು ಈ ವಿಷಯದ ಬಗ್ಗೆ ಹುಬ್ಬಳ್ಳಿಯಲ್ಲಿರುವ ಅಡಿಷನಲ್ ಅಡ್ವೋಕೇಟ್ ಜನರಲ್ ಅವರಿಂದ ಕಾನೂನು ಸಲಹೆ ಪಡೆದು ನಾಳೆ ನಿರ್ಣಯ ನೀಡುವುದಾಗಿ ತಿಳಿಸಿ ಸದನವನ್ನು ನಡೆಸಲು ಅನುವು ಮಾಡಿಕೊಡಬೇಕಾಗಿ ವಿರೋಧ ಪಕ್ಷದ ಸದಸ್ಯರಿಗೆ ಕೋರಿದರು.

ಇದರಿಂದ ವಿರೋಧ ಪಕ್ಷದವರು ಗೊಂದಲ ಉಂಟುಮಾಡಿದರು. ಅಡಿಷನಲ್ ಅಡ್ವೋಕೇಟ್ ಜನರಲ್ ಅವರಿಂದ ಸಲಹೆ ಪಡೆಯುವುದು ಉಚಿತವಲ್ಲವೆಂದು, ನಿಯಮದಡಿ ಬರುವುದಿಲ್ಲವೆಂದು ಗೊಂದಲ ಉಂಟಾಯಿತು.

ಮಾನ್ಯ ಸದಸ್ಯರಾದ ಶ್ರೀ ವಿ.ಎಸ್.ಉಗ್ರಪ್ಪ ಅವರು ಮಾತನಾಡಿ ಭಾರತ ಸಂವಿಧಾನದ ಅನುಚ್ಛೇಧ 162ರ ಪ್ರಕಾರ ಅವಕಾಶವಿರುವುದಾಗಿ ತಿಳಿಸಿದರು. ಇದರಿಂದ ಸದನದಲ್ಲಿ ಗೊಂದಲ ಉಂಟಾಯಿತು.

ನಿಯಮ 62ರಡಿ ಹಾಗೂ 147ರಡಿ ಹಾಗೂ ನಿಯಮ 319ರಡಿ ಮಾನ್ಯ ಶ್ರೀ ಬಸವರಾಜ ಹೊರಟ್ಟಿ ಹಾಗೂ ಶ್ರೀ ರಾಮಚಂದ್ರಗೌಡ ಅವರುಗಳು ಕ್ರಿಯಾಲೋಪ ತಂದು ಮಾತನಾಡಿದರು.

ಮಾನ್ಯ ಸಭಾಪತಿಯವರು ಶ್ರೀ ರಾಮಚಂದ್ರಗೌಡ ಅವರು ತಂದಿರುವ ಕ್ರಿಯಾಲೋಪದ ಬಗ್ಗೆ ನಿರ್ಣಯ ನೀಡಿದರು.

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಮಾತನಾಡಿದರು.

ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದರು.

ಮಾನ್ಯ ಶ್ರೀ ಮತ್ತಿಕಟ್ಟಿ ವೀರಣ್ಣ ಅವರು ಮಾತನಾಡಿದರು.

ಮಾನ್ಯ ಸಭಾನಾಯಕರು ಮಾತನಾಡಿದರು.

ಮಾನ್ಯ ಶ್ರೀ ಆರ್.ಕೆ.ಸಿದ್ದರಾಮಣ್ಣ ಅವರು ಮಾತನಾಡಿದರು.

ಸದನವನ್ನು ಮಧ್ಯಾಹ್ನ:2.18 ಗಂಟೆಯಿಂದ ಮಧ್ಯಾಹ್ನ:3.30ರ ವರೆಗೆ ಮುಂದೂಡಿರುವುದಾಗಿ ಮಾನ್ಯ ಸಭಾಪತಿಯವರು ಪ್ರಕಟಿಸಿದರು.

ಸದನವು ಪುನಃ ಮಧ್ಯಾಹ್ನ:3.57 ಗಂಟೆಗೆ ಮಾನ್ಯ ಸಭಾಪತಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

**1.ಪ್ರಕಟಣೆ**

ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುವುದಾಗಿ ಮಾನ್ಯ ಸಭಾಪತಿಯವರು ಪ್ರಕಟಿಸಿದರು.

ಕರ್ನಾಟಕ ವಿಧಾನಸಭೆ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನಸಭೆಯು ದಿನಾಂಕ:19.12.2014ರಂದು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀರಿಸಿತೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುವುದಾಗಿ ತಿಳಿಸಿದರು.

01) ಕರ್ನಾಟಕ ಧನ ವಿನಿಯೋಗ (ಸಂಖ್ಯೆ 4) ವಿಧೇಯಕ, 2014

02) ಕರ್ನಾಟಕ ಸ್ಟ್ಯಾಂಪು (ಎರಡನೇ ತಿದ್ದುಪಡಿ) ವಿಧೇಯಕ, 2014

03) ಕರ್ನಾಟಕ ಮರಗಳ ಸಂರಕ್ಷಣಾ (ತಿದ್ದುಪಡಿ) ವಿಧೇಯಕ, 2014

ಹಾಗೂ ದಿನಾಂಕ:18.12.2014ರಂದು ವಿಧಾನ ಸಭೆಯಲ್ಲಿ ಅಂಗೀಕೃತವಾಗಿರುವ ವಿಧೇಯಕ "ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕ, 2014

ಮಾನ್ಯ ಶ್ರೀ ಗೋ.ಮಧುಸೂದನ್ ಅವರು Point of order ತಂದು ನಿಯಮ 319ನ್ನು ಉದಾಹರಿಸಿದರು ಮಾನ್ಯ ಸಭಾಪತಿಯವರು Point of order ಬಗ್ಗೆ ನಿರ್ಣಯವನ್ನು ತಡೆಯಿಡಿವುದಾಗಿ ತಿಳಿಸಿದರು ಇದರಿಂದ ಗೊಂದಲ ಉಂಟಾಯಿತು.

ಕಾರ್ಯದರ್ಶಿಯವರು:– ಕರ್ನಾಟಕ ವಿಧಾನ ಸಭೆಯಿಂದ ಅಂಗೀಕೃತವಾಗಿರುವ ಧನವಿನಿಯೋಗ (ಸಂಖ್ಯೆ 4) ವಿಧೇಯಕವನ್ನು ಸಭೆಯ ಮುಂದಿಟ್ಟರು.

**ಶ್ರೀ ಆರ್.ಕೆ.ಸಿದ್ದರಾಮಣ್ಣ** ಅವರು ಎತ್ತಿರುವ ವಿಷಯದ ಬಗ್ಗೆ ನಾಳೆ ಬೆಳಿಗ್ಗೆ ರೂಲಿಂಗ್ ನೀಡಲಾಗುವುದಾಗಿ ಸಭಾಪತಿಯವರು ತಿಳಿಸಿದರು. ಇದನ್ನು ವಿರೋಧಿಸಿ ವಿರೋಧ ಪಕ್ಷದ ನಾಯಕರು ಹಾಗೂ ವಿರೋಧ ಪಕ್ಷದ ಸದಸ್ಯರುಗಳು ಘೋಷಣೆ ಕೂಗುತ್ತ ಸದನದ ಭಾವಿಗೆ ಬಂದರು.

## 2.ವಿತ್ತೀಯ ಕಾರ್ಯಕಲಾಪ

ಮಾನ್ಯ ಮುಖ್ಯಮಂತ್ರಿಯವರು 2014–15ನೇ ಸಾಲಿನ ರಾಜ್ಯ ಹಣಕಾಸಿನ ಮಧ್ಯ ವಾರ್ಷಿಕ ಪರಿಶೀಲನೆ ವರದಿಯನ್ನು ಒಪ್ಪಿದರು.

ದಿನಾಂಕ:19.12.2014ರ ಸಮೂಹ–Vರ ಸದನದಲ್ಲಿ ಉತ್ತರಿಸುವ ಒಟ್ಟು 15 ಪ್ರಶ್ನೆಗಳ ಪೈಕಿ 14 ಪ್ರಶ್ನೆಗಳಿಗೆ ಹಾಗೂ ಲಿಖಿತ ಮೂಲಕ ಉತ್ತರಿಸುವ ಒಟ್ಟು 155 ಪ್ರಶ್ನೆಗಳ ಪೈಕಿ 113 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಸಭಾನಾಯಕರು ಮಂಡಿಸಿದರು.

## 3.ಶಾಸನ ರಚನೆ

01) ಮಾನ್ಯ ಮುಖ್ಯಮಂತ್ರಿಗಳು ವಿಧಾನ ಸಭೆಯಿಂದ ಅಂಗೀಕೃತರೂಪದಲ್ಲಿರುವ ಕರ್ನಾಟಕ ಧನ ವಿನಿಯೋಗ (ಸಂಖ್ಯೆ, 4) ವಿಧೇಯಕ, 2014ನ್ನು ಪರ್ಯಾಲೋಚಿಸಬೇಕೆಂದು ಸೂಚಿಸಿದರು.

ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸಿದರು.

ವಿಧೇಯಕವನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

02) ಕರ್ನಾಟಕ ವಿಧಾನ ಸಭೆಯಿಂದ ಅಂಗೀಕೃತವಾದ (ತಿದ್ದುಪಡಿಗಳೊಂದಿಗೆ) ರೂಪದಲ್ಲಿರುವ ಕರ್ನಾಟಕ ಪಶುವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕ 2014ನ್ನು ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಪರ್ಯಾಲೋಚಿಸಬೇಕೆಂದು ಹಾಗೂ ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸಿದರು.

ವಿಧೇಯಕವನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

03) ಶ್ರೀ ರಾಮಲಿಂಗಾರೆಡ್ಡಿ, ಮಾನ್ಯ ಸಾರಿಗೆ ಸಚಿವರು ತಿದ್ದುಪಡಿಯೊಂದಿಗೆ ವಿಧಾನ ಸಭೆಯಿಂದ ಅಂಗೀಕೃತರೂಪದಲ್ಲಿರುವ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕ 2013ನ್ನು ಪರ್ಯಾಲೋಚಿಸಬೇಕೆಂದು ಹಾಗೂ ಅಂಗೀಕರಿಸಬೇಕೆಂದು ಸೂಚಿಸಿದರು.

ವಿಧೇಯಕವನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

04) ಶ್ರೀ ಟಿ.ಬಿ. ಜಯಚಂದ್ರ, ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪಶು ಸಂಗೋಪನೆ ಮತ್ತು ಮುಜರಾಯಿ ಸಚಿವರು ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಭಾರತ ಉತ್ತರಾಧಿಕಾರ (ಕರ್ನಾಟಕ ತಿದ್ದುಪಡಿ) ವಿಧೇಯಕ 2014ನ್ನು ಪರ್ಯಾಲೋಚಿಸಬೇಕೆಂದು ಹಾಗೂ ಅಂಗೀಕರಿಸಬೇಕೆಂದು ಸೂಚಿಸಿದರು.

ವಿಧೇಯಕವನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

05) ಶ್ರೀ ಟಿ.ಬಿ. ಜಯಚಂದ್ರ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪಶು ಸಂಗೋಪನೆ ಮತ್ತು ಮುಜರಾಯಿ ಸಚಿವರು: ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ನ್ಯಾಯಾಲಯ ಶುಲ್ಕಗಳು ಮತ್ತು ದಾವೆಗಳ ಮೌಲ್ಯ ನಿರ್ಣಯ (ತಿದ್ದುಪಡಿ) ವಿಧೇಯಕ 2014ನ್ನು ಪರ್ಯಾಲೋಚಿಸಬೇಕೆಂದು ಹಾಗೂ ಅಂಗೀಕರಿಸಬೇಕೆಂದು ಸೂಚಿಸಿದರು.

ವಿಧೇಯಕವನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

06) ಶ್ರೀ ಕಿಮ್ಮನೆ ರತ್ನಾಕರ್: ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ಶಿಕ್ಷಣ (ತಿದ್ದುಪಡಿ) ವಿಧೇಯಕ, 2014ರ ಮೇಲಿನ ಪ್ರಸ್ತಾವನೆಯನ್ನು ಪರ್ಯಾಲೋಚಿಸಬೇಕೆಂದು ಸೂಚಿಸಿದರು.

ಈ ಕುರಿತು ಈ ಕೆಳಕಂಡ ಸದಸ್ಯರುಗಳು ಮಾತನಾಡಿರು.

**ಶ್ರೀಯುತರುಗಳಾದ:**

01) ಪುಟ್ಟಣ್ಣ (ಮಾನ್ಯ ಉಪ ಸಭಾಪತಿಯವರು)

02) ಬಸವರಾಜ ಹೊರಟ್ಟಿ

03) ಮರಿತಿಬ್ಬೇಗೌಡ

ಸ್ಪಷ್ಟೀಕರಣ ಕೋರಿದರು.

ಮಾನ್ಯ ಸಚಿವರು ಸ್ಪಷ್ಟೀಕರಣ ನೀಡಿದರು.

ಶ್ರೀ ಮರಿತಿಬ್ಬೇಗೌಡ ಅವರು ವಿಧೇಯಕವನ್ನು ಹಿಂಪಡೆಯುವಂತೆ ಕೋರಿದರು.

ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಸದನದ ಭಾವಿಯಿಂದ ವಿರೋಧಿಸಿ ಘೋಷಣೆ ಕೂಗಿದರು.

ಮಾನ್ಯ ಸಚಿವರು ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸಿದರು.

ಕನ್ನಡ ವಿರೋಧಿ ಸರ್ಕಾರವೆಂದು ಘೋಷಣೆ ಕೂಗಿ ಇದನ್ನು ವಿರೋಧಿಸಿ ವಿರೋಧ ಪಕ್ಷದ ನಾಯಕರು ಹಾಗೂ ಶ್ರೀ ಪುಟ್ಟಣ್ಣ, ಉಪ ಸಭಾಪತಿಗಳು ಸಭಾತ್ಯಾಗ ಮಾಡಿದರು.

ವಿಧೇಯಕವನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

07) ಶ್ರೀ ಟಿ.ಬಿ. ಜಯಚಂದ್ರ, ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪಶು ಸಂಗೋಪನೆ ಮತ್ತು ಮುಜರಾಯಿ ಸಚಿವರು ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2014ನೇ ಸಾಲಿನ ಕರ್ನಾಟಕ ಪೌರ ಸಭೆಗಳು ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಿ, ಅಂಗೀಕರಿಸಬೇಕೆಂದು ಸೂಚಿಸಿದರು.

ವಿಧೇಯಕವನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

ಸದನವನ್ನು ಸಂಜೆ:5.22 ರಿಂದ ದಿನಾಂಕ:20.12.2014ರಂದು ಬೆಳಗ್ಗೆ:11.00 ಗಂಟೆಯವರೆಗೆ ಮುಂದೂಡಿರುವುದಾಗಿ ಮಾನ್ಯ ಸಭಾಪತಿಯವರು ತಿಳಿಸಿದರು.

**ವಿ.ಶ್ರೀಶ್**
**ಕಾರ್ಯದರ್ಶಿ**

**ಕರ್ನಾಟಕ ವಿಧಾನ ಪರಿಷತ್ತು**
**ನೂರ ಇಪ್ಪತ್ತಾರನೇ ಅಧಿವೇಶನ**
**ಲಘು ಪ್ರಕಟಣೆ ಭಾಗ – 1**
**ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ**
**ಶನಿವಾರ, ದಿನಾಂಕ: 20.12.2014**

(10)

ಸದನವು ಬೆಳಗ್ಗೆ:11.06 ಗಂಟೆಗೆ ಮಾನ್ಯ ಸಭಾಪತಿ (**ಶ್ರೀ ಡಿ.ಹೆಚ್.ಶಂಕರಮೂರ್ತಿ**) ಅವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿ ನಿಯಮ 307ರಡಿಯಲ್ಲಿ ನೀಡಲಾಗಿರುವ ಸೂಚನೆಯನ್ನು ಚರ್ಚೆಗೆ ತೆಗೆದುಕೊಳ್ಳುವಂತೆ ಕೋರಿದರು.

ಆಡಳಿತ ಪಕ್ಷದವರು ಇದನ್ನು ವಿರೋಧಿಸಿದ್ದರಿಂದ ಗೊಂದಲ ಉಂಟಾಯಿತು.

**1.ಪ್ರಕಟಣೆ**

ಕರ್ನಾಟಕ ವಿಧಾನ ಸಭೆಯು ದಿನಾಂಕ:20.12.2014ರಂದು 2010ನೇ ಸಾಲಿನ "ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ ಹಾಗೂ 2012ನೇ ಸಾಲಿನ ಗೋವಧೆ ಪ್ರಬಂಧಕ ಮತ್ತು ಜಾನುವಾರು ಪರಿರಕ್ಷಣೆ (ತಿದ್ದುಪಡಿ) ವಿಧೇಯಕವನ್ನು ಹಿಂಪಡೆಯಲಾಗಿದೆ ಎಂದು ಮಾನ್ಯ ಸಭಾಧ್ಯಕ್ಷರು ತಿಳಿಸಿರುವುದಾಗಿ ಮಾನ್ಯ ಸಭಾಪತಿಯವರು ಪ್ರಕಟಿಸಿದರು.

### 2.ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಕಾರ್ಯದರ್ಶಿಯವರು ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದಿಟ್ಟರು.

01) ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ(ತಿದ್ದುಪಡಿ) ವಿಧೇಯಕ, 2014

02) ಕರ್ನಾಟಕ ಮರಗಳ ಸಂರಕ್ಷಣಾ (ತಿದ್ದುಪಡಿ) ವಿಧೇಯಕ, 2014

ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ನಿಯಮ 307ರ ಸೂಚನೆಗಳಿಗೆ ಚರ್ಚೆಗೆ ಅವಕಾಶ ನೀಡದಿರುವುದರಿಂದ ಅದನ್ನು ವಿರೋಧಿಸಿ ಸದನದ ಬಾವಿಗೆ ಬಂದರು.

### 3.ಶಾಸನ ರಚನೆ

01) ಶ್ರೀ ಟಿ.ಬಿ. ಜಯಚಂದ್ರ, ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪಶು ಸಂಗೋಪನೆ ಮತ್ತು ಮುಜರಾಯಿ ಸಚಿವರು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2014ನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿದರು.

ವಿಧೇಯಕವನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

02) ಶ್ರೀ ಬಿ. ರಮನಾಥ ರೈ. ಮಾನ್ಯ ಅರಣ್ಯ ಸಚಿವರು "ಕರ್ನಾಟಕ ಮರಗಳ ಸಂರಕ್ಷಣಾ (ತಿದ್ದುಪಡಿ) ವಿಧೇಯಕ, 2014ನ್ನು ಪರ್ಯಾಲೋಚಿಸಿ ಹಾಗೂ ಅಂಗೀಕರಿಸಬೇಕೆಂದು ಸೂಚಿಸಿದರು.

ವಿಧೇಯಕವನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

**ಸಭೆಯ ಮುಂದಿಡಲಾಗಿರುವ ಕಾಗದ ಪತ್ರಗಳು**

ಕಾರ್ಯದರ್ಶಿಯವರು ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2014ನೇ ಸಾಲಿನ ಕರ್ನಾಟಕ ಸ್ಟ್ಯಾಂಪು (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದಿಟ್ಟರು.

**ಶಾಸನ ರಚನೆ**

**ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.**

03) ಶ್ರೀ ಶ್ರೀನಿವಾಸಪ್ರಸಾದ, ಮಾನ್ಯ ಕಂದಾಯ ಸಚಿವರು ಕರ್ನಾಟಕ ಸ್ಟ್ಯಾಂಪು (ಎರಡನೇ ತಿದ್ದುಪಡಿ) ವಿಧೇಯಕ 2014ನ್ನು ಪರ್ಯಾಲೋಚಿಸಿ ಹಾಗೂ ಅಂಗೀಕರಿಸಬೇಕೆಂದು ಸೂಚಿಸಿದರು.

ವಿಧೇಯಕವನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

**04. ವಿಧೇಯಕವನ್ನು ಹಿಂದಕ್ಕೆ ಪಡೆಯುವುದು**

01) ಶ್ರೀ ಟಿ.ಬಿ. ಜಯಚಂದ್ರ, ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪಶು ಸಂಗೋಪನೆ ಮತ್ತು ಮುಜರಾಯಿ ಸಚಿವರು ಅವರು ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ, 2014ನ್ನು ಹಿಂಪಡೆಯಲು ಅನುಮತಿ ಕೋರಿದರು.

ವಿಧೇಯಕವನ್ನು ಧ್ವನಿ ಮತದ ಮೂಲಕ ಹಿಂಪಡೆಯಲಾಯಿತು.

02) ಶ್ರೀ ಟಿ.ಬಿ. ಜಯಚಂದ್ರ, ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪಶು ಸಂಗೋಪನೆ ಮತ್ತು ಮುಜರಾಯಿ ಸಚಿವರು ಅವರು ಕರ್ನಾಟಕ ಗೋವಧೆ ಪ್ರತಿಬಂಧಕ ಮತ್ತು ಜಾನುವಾರು ಪರಿರಕ್ಷಣೆ (ತಿದ್ದುಪಡಿ) ವಿಧೇಯಕ, 2012ನ್ನು ಹಿಂಪಡೆಯಲು ಅನುಮತಿ ಕೋರಿದರು.

ವಿಧೇಯಕವನ್ನು ಧ್ವನಿ ಮತದ ಮೂಲಕ ಹಿಂಪಡೆಯಲಾಯಿತು.

ಉತ್ತರ ಕರ್ನಾಟಕದ ಸರ್ವತೋಮುಖ ಅಭಿವೃದ್ಧಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳು ನೀಡಿದರು.

ದಿನಾಂಕ: 19–12–2014 ತಿಳಿಸಲಾಗಿದ್ದ 307ರ ನಿಯಮದ ಮೇಲೆನ ಕಾಯ್ದಿರಿಸಲಾಗಿದ್ದ ತೀರ್ಪನ್ನು ನೀಡುವ ಅವಶ್ಯಕತೆ ಇಲ್ಲವೆಂದು ಮಾನ್ಯ ಸಭಾಪತಿಯವರು ತಿಳಿಸಿದರು.

ದಿನಾಂಕ:10.12.2014ರಂದು ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪಶು ಸಂಗೋಪನೆ ಮತ್ತು ಮುಜರಾಯಿ ಸಚಿವರ ಮೇಲಿನ ನಿಂದನೆಯ ಪದಗಳನ್ನು ಕಡತದಿಂದ ತೆಗೆದು ಹಾಕಲು ತಿಳಿಸಲಾಯಿತು.

ದಿನಾಂಕ:09.12.2014 ರಿಂದ ದಿನಾಂಕ:20.12.2014ರವರೆಗೆ ನಡೆದ ಅಧಿವೇಶನದ ಕಾರ್ಯ ಕಲಾಪಗಳ ಸಾರಾಂಶವನ್ನು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

ಸದನವನ್ನು ಬೆಳಗ್ಗೆ:11.47 ಗಂಟೆಯಲ್ಲಿ ಅನಿರ್ದಿಷ್ಟ ಕಾಲದವರೆಗೆ ಮುಂದೂಡಿರುವುದಾಗಿ ಮಾನ್ಯ ಸಭಾಪತಿಯವರು ಪ್ರಕಟಿಸಿದರು.

**ವಿ.ಶ್ರೀಶ್**
**ಕಾರ್ಯದರ್ಶಿ**

ನಿರ್ದೇಶಕರು, ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು ಕಾ.ಸೂ.– ಪ್ರತಿಗಳು (ಪಿ7)